## ದಿನಾಂಕ:26.09.2018. ರಂದು ನಡೆದ ಕರ್ನಾಟಕ ರಾಜ್ಯ ಆಹಾರ ಆಯೋಗದ ಹದಿನೈದನೆಯ ಸಭೆಯ ನಡವಳಿಗಳು.

*****

ಉಪಸ್ಥಿತರು :

1) ಡಾ.ಎನ್.ಕೃಷ್ಣಮೂರ್ತಿ, ಅಧ್ಯಕ್ಷರು, ಕರ್ನಾಟಕ ರಾಜ್ಯ ಆಹಾರ ಆಯೋಗ, ಬೆಂಗಳೂರು.
2) ಶ್ರೀ ವಿ.ಬಿ.ಪಾಟೀಲ್, ಸದಸ್ಯರು, ಕರ್ನಾಟಕ ರಾಜ್ಯ ಆಹಾರ ಆಯೋಗ, ಬೆಂಗಳೂರು.
3) ಶ್ರೀ ಹೆಚ್.ವಿ.ಶಿವಶಂಕರ್, ಸದಸ್ಯರು, ಕರ್ನಾಟಕ ರಾಜ್ಯ ಆಹಾರ ಆಯೋಗ, ಬೆಂಗಳೂರು.
4) ಶ್ರೀ ಹಸಬಿ.ಡಿ.ಜಿ., ಸದಸ್ಯರು, ಕರ್ನಾಟಕ ರಾಜ್ಯ ಆಹಾರ ಆಯೋಗ, ಬೆಂಗಳೂರು.
5) ಶ್ರೀಮತಿ ಮಂಜುಳ ಬಾಯಿ, ಆರ್.ಸಾತ್‌ನೂರ್ ಸದಸ್ಯರು, ಕರ್ನಾಟಕ ರಾಜ್ಯ ಆಹಾರ ಆಯೋಗ, ಬೆಂಗಳೂರು.
6) ಶ್ರೀಮತಿ ಸುಜಾತ ಡಿ.ಹೊಸಮನಿ, ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಆಹಾರ ಆಯೋಗ ಅಪರ ನಿರ್ದೇಶಕರು-2/ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಬೆಂಗಳೂರು.
7) ಶ್ರೀ ವಿಜಯ್ ಕುಮಾರ್.ಹೆಚ್.ಆರ್ ಜಂಟಿ ನಿರ್ದೇಶಕರು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಬೆಂಗಳೂರು.
8) ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ (ಐ.ಸಿ.ಡಿ.ಎಸ್.ವಿಭಾಗ), ಬೆಂಗಳೂರು.
9) ಶ್ರೀ.ಚಂದ್ರಶೇಖರ್ ಉಪ ಪ್ರಧಾನ ವ್ಯವಸ್ಥಾಪಕರು ಕರ್ನಾಟಕ ಆಹಾರ ನಾಗರಿಕ ಸರಬರಾಜು ನಿಗಮ ನಿಯಮಿತ, ಬೆಂಗಳೂರು.
10) ಸಹಾಯಕ ನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ಮಧ್ಯಾಹ್ನ ಉಪಾಹಾರ ಯೋಜನೆ.
11) ಉಪ ನಿರ್ದೇಶಕರು (ಶಿಕ್ಷಣ) ಸಮಾಜ ಕಲ್ಯಾಣ ಇಲಾಖೆ ಬೆಂಗಳೂರು.
12) ಉಪ ನಿಯಂತ್ರಕರು (ಆಡಳಿತ) ಕಾನೂನು ಮಾಪನ ಶಾಸ್ತ್ರ ಇಲಾಖೆ ಬೆಂಗಳೂರು.

***

ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಆಹಾರ ಆಯೋಗರವರು ಸಭೆಯಲ್ಲಿ ಹಾಜರಿದ್ದ ಅಧ್ಯಕ್ಷರು, ಸದಸ್ಯರು ಹಾಗೂ ಎಲ್ಲಾ ಅಧಿಕಾರಿಗಳಿಗೆ ಸ್ವಾಗತವನ್ನು ಕೋರಿ ಸಭೆಯ ಅಧ್ಯಕ್ಷತೆ ವಹಿಸಲು ಮಾನ್ಯ ಅಧ್ಯಕ್ಷರನ್ನು ವಿನಂತಿಸಿದರು.

**ಅಜೆಂಡಾ – 1 :**

ದಿನಾಂಕ: 26.09.2018 ರಂದು ನಡೆದ ಸಭೆಯ ನಡವಳಿಯನ್ನು ಓದಿ ದೃಢೀಕರಿಸಲಾಯಿತು.

**ಅಜೆಂಡಾ-2**

ಹಿಂದಿನ ಸಭೆಯಲ್ಲಿ ತೀರ್ಮಾನಿಸಿದ ವಿಷಯಗಳ ಬಗ್ಗೆ ತೆಗೆದುಕೊಂಡ ಕ್ರಮಗಳನ್ನು/ಅನುಪಾಲನಾ ವರದಿಗಳನ್ನು ಪರಿಶೀಲಿಸಲಾಯಿತು.

ಅಜೆಂಡಾ-3 : ಕೆ.ಎಫ್.ಸಿ.ಎಸ್.ಸಿ

ಕೆಎಫ್.ಸಿ.ಎಸ್.ಸಿ ಗೋದಾಮಿನಲ್ಲಿ ದಾಸ್ತಾನನ್ನು ವೈಜ್ಞಾನಿಕವಾಗಿ ಜೋಡಿಸುತ್ತಿಲ್ಲವೆಂದು ಹಾಗೂ ಮರದ ಕ್ರೇಟ್ಸ್ ಹಾಕುವ ಬಗ್ಗೆ ಎಲ್ಲಾ ಜಿಲ್ಲಾ ವ್ಯವಸ್ಥಾಪಕರುಗಳಿಗೆ ದಿನಾಂಕ 11-9-2018 ರಂದು ಸುತ್ತೋಲೆಯ ಮೂಲಕ ಗೋದಾಮುಗಳಲ್ಲಿ ನೆಲಹಾಸುವ ಮುನ್ನಾ ವುಡನ್ ಕ್ರೇಟ್ ಹಾಕುವ ಬಗ್ಗೆ ಕ್ರಮ ಕೈಗೊಳ್ಳಲು ಮತ್ತು ಇದರ ಬಗ್ಗೆ ವಿವರವಾದ ಮಾಹಿತಿಯನ್ನು ಕಳುಹಿಸಿಕೊಡಲು ಸೂಚಿಸಲಾಗಿದೆ ಎಂದು ಅನುಪಾಲನಾ ವರದಿಯಲ್ಲಿ ತಿಳಿಸಲಾಗಿದ್ದು, ಸದರಿ ಸುತ್ತೋಲೆಯನ್ನು ಪರಿಶೀಲಿಸಲಾಗಿ, ಮೊದಲ ಪ್ಯಾರಾದಲ್ಲಿ "ಟಾರ್ಪಾಲ್ ಮತ್ತು ಮರದ ಕ್ರೇಟ್‌ನ್ನು ಕಡ್ಡಾಯವಾಗಿ ಹಾಕಬೇಕೆಂದು" ಸೂಚಿಸಲಾಗಿರುತ್ತದೆ. 2ನೇ ಪ್ಯಾರಾದಲ್ಲಿ "ಕ್ರೇಟ್ಸ್‌ಗಳನ್ನು ಉಪಯೋಗಿಸುವುದಾದರೆ " ಎಂದು ನಮೂದಾಗಿರುತ್ತದೆ. ಸದರಿ ಸುತ್ತೋಲೆಯು ಅಸ್ಪಷ್ಟವಾಗಿದ್ದು, ಸದರಿ ವರದಿಯನ್ನು ಒಪ್ಪಲು ಸಾಧ್ಯವಿಲ್ಲವೆಂದು ಆಯೋಗವು ಅಸಮಧಾನ ವ್ಯಕ್ತಪಡಿಸಿತು. ಅಲ್ಲದೆ ಮರದ ಕ್ರೇಟ್ಸ್‌ನ್ನು ಕಡ್ಡಾಯವಾಗಿ ಉಪಯೋಗಿಸಬೇಕಾಗಿ ತಿಳಿಸಿದರು. ಈ ಕ್ರಮವನ್ನು ಅನುಸರಿಸದೆ ಇದ್ದಲ್ಲಿ, ಆಹಾರಧಾನ್ಯ ಹಾಳಾಗಿ ನಿಗಮಕ್ಕೆ ನಷ್ಟವಾಗುವುದಾಗಿ ತಿಳಿಸಿದರು. ಅಲ್ಲದೆ ಹಾಲಿ ನಿಗಮದಿಂದ ಸಲ್ಲಿಸಲಾದ ಲಾಭ/ನಷ್ಟದ ತಃಖ್ತೆಯು ಅಸ್ಪಷ್ಟವಾಗಿದ್ದು, ಸರಿಯಾದ ಮಾಹಿತಿಯನ್ನು ಸಲ್ಲಿಸುವಂತೆ ನಿಗಮದ ಅಧಿಕಾರಿಗಳಿಗೆ ಆಯೋಗವು ಸೂಚಿಸಿತು. ಮರದ ಕ್ರೇಟ್ಸ್ ಉಪಯೋಗದ ಬಗ್ಗೆ ಮೊದಲಿನ ಸಭೆ ನಡೆದಾಗಿನಿಂದಲೂ ಚರ್ಚಿಸಲ್ಪಡುತ್ತಿದ್ದು, ನಿಗಮದ ಬೇಜವಾಬ್ದಾರಿಯ ಹೇಳಿಕೆ ಹಾಗೂ ಕಾರ್ಯವೈಖರಿಯಿಂದಾಗಿ ಸಮಸ್ಯೆ ಪರಿಹಾರವಾಗದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು.

(ಕ್ರಮ: ಪ್ರಧಾನ ವ್ಯವಸ್ಥಾಪಕರು ಕೆ.ಎಫ್.ಸಿ.ಎಸ್.ಸಿ)

ಅಜೆಂಡಾ: 4

ಮಧ್ಯಾಹ್ನ ಉಪಹಾರ ಯೋಜನೆಯ ಪರಿಣಾಮಕಾರಿ ಅನುಷ್ಠಾನದ ಬಗ್ಗೆ:

ಅಕ್ಷಯಪಾತ್ರೆಯ ಯೋಜನೆಯಡಿ ಶಾಲೆಗಳಿಗೆ ನೀಡಲಾಗುತ್ತಿರುವ ಆಹಾರದಲ್ಲಿ ಈರುಳ್ಳಿ, ಬೆಳ್ಳುಳ್ಳಿ, ಇಂತಹ ಪೌಷ್ಠಿಕ ಪದಾರ್ಥಗಳು ಬಳಕೆಯಾಗುತ್ತಿಲ್ಲದಿರುವ ಕುರಿತು ವರದಿಯನ್ನು ಕೋರಲಾಗಿತ್ತು. ಆದರೆ ಈ ಬಗ್ಗೆ ಇಸ್ಕಾನ್ ಸಂಸ್ಥೆಯವರು ಪ್ರಯೋಗಾಲಯದಿಂದ ಪಡೆದಿರುವ ಪತ್ರಗಳನ್ನು ಲಗತ್ತಿಸಲಾಗಿದ್ದು, ಇಲಾಖೆಯ ಅಭಿಪ್ರಾಯವನ್ನು ಜಂಟಿ ನಿರ್ದೇಶಕರು ರವರು ಅಕ್ಷಯ ಪಾತ್ರೆ ಪ್ರತಿಷ್ಠಾನ, ಬೆಂಗಳೂರು ಈ ಸಂಸ್ಥೆಗೆ ಪತ್ರ ಬರೆದು ಆಹಾರ ವಿಶ್ಲೇಷಣಾ ವರದಿಯನ್ನು ಸಲ್ಲಿಸಲು ಕೋರಲಾಗಿತ್ತು. ಅಕ್ಷಯ ಪಾತ್ರೆ ಯೋಜನೆಯಡಿ ಸರಬರಾಜಾಗುತ್ತಿರುವ ಆಹಾರ ಹಾಗೂ ಶಾಲೆಗಳಲ್ಲಿ ತಯಾರಿಸುವ ಆಹಾರದಲ್ಲಿರುವ ಪೌಷ್ಠಿಕಾಂಶದ ಬಗ್ಗೆ ಪೌಷ್ಠಿಕ ತಜ್ಞರಿಂದ (Nutritionist) ರವರಿಂದ ಪರಿಶೀಲಿಸಿ ವರದಿ ಪಡೆದು ಆಯೋಗಕ್ಕೆ ಸಲ್ಲಿಸಲು ತಿಳಿಸಲಾಯಿತು. ಹಾಗೂ ಇಸ್ಕಾನ್ ಸಂಸ್ಥೆಯವರೊಂದಿಗೆ ಮಾಡಿಕೊಂಡಿರುವ ಎಂ.ಓ.ಯು. ಪ್ರತಿಯನ್ನು ಸಹ ಆಯೋಗಕ್ಕೆ ಸಲ್ಲಿಸಲು ತಿಳಿಸಲಾಯಿತು.

ಆಯೋಗವು ಶಾಲೆಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಕೆಲವು ಶಾಲೆಗಳಲ್ಲಿ ಶೌಚಾಲಯಗಳು ಇಲ್ಲದಿರುವುದನ್ನು ಹಾಗೂ ಬಾಲಕ/ಬಾಲಕಿಯರಿಗೆ ಪ್ರತ್ಯೇಕ ಶೌಚಾಲಯಗಳನ್ನು ನಿರ್ಮಿಸಲು ಅಗತ್ಯ ಕ್ರಮವಹಿಸುವಂತೆ ಹಾಗೂ ಶೌಚಾಲಯಗಳ ಸ್ವಚ್ಚತೆಯನ್ನು ಶಾಲಾ ಶಿಕ್ಷಕರಿಂದ ಹಾಗೂ ಮಕ್ಕಳಿಂದ ಮಾಡಿಸದೆ ನಿರ್ವಹಣೆಗೆ ವ್ಯವಸ್ಥೆ ಕಲ್ಪಿಸುವ ಬಗ್ಗೆ ಕ್ರಮವಹಿಸುವಂತೆ ಸೂಚಿಸಲಾಯಿತು. ಶೌಚಾಲಯದಲ್ಲಿ ನೀರು, ಸ್ವಚ್ಚತೆಯ ವ್ಯವಸ್ಥೆ ಸರಿಯಾಗಿರುವುದಿಲ್ಲವೆಂದು ಗಮನಿಸಲಾಗಿರುತ್ತದೆ. ಇದನ್ನು ನಿರ್ದೇಶಕರ ಗಮನಕ್ಕೆ

ತಂದು ಬಿಡುಗಡೆಯಾಗುವ ಯಾವುದಾದರೂ ಅನುದಾನದಿಂದ ಶೌಚಾಲಯಗಳನ್ನು ನಿರ್ಮಿಸಲು ಮತ್ತು ಅದರ ನಿರ್ವಹಣೆಯ ವೆಚ್ಚವನ್ನು ಭರಿಸಲು ಆಯೋಗವು ಸಲಹೆ ನೀಡಿತು.

ಸರ್ವಜ್ಞನಗರ ಶಾಲೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಅಕ್ಷಯ ಕೋಶ ಯೋಜನೆಯಡಿ ಇಸ್ಕಾನ್ ಸಂಸ್ಥೆಯಿಂದ ಪ್ರತಿ ದಿನವೂ 1 1/4 ಬಾಕ್ಸ್ ಅನ್ನವನ್ನು ತಂದು ನೀಡುತ್ತಿರುವುದನ್ನು ಗಮನಿಸಲಾಗಿರುತ್ತದೆ. ಹಾಗೂ ಶಾಲೆಯ ಮುಖ್ಯೋಪಧ್ಯಾಯರು ದೃಢೀಕರಿಸಿದರು. ಯಾವ ಆಧಾರದ ಮೇಲೆ ಸದರಿ ಸಂಸ್ಥೆಗೆ ಹಣ ಪಾವತಿಸಲಾಗಿದೆ ಎಂದು ಪ್ರಶ್ನಿಸಿದಾಗ, ಮಕ್ಕಳ ಹಾಜರಾತಿ ಮೇಲೆ ನೀಡುತ್ತಿರುವುದಾಗಿ ಹಾಜರಿದ್ದ ಅಧಿಕಾರಿಗಳು ತಿಳಿಸಿದರು. ಪ್ರತಿ ದಿನ ಒಂದೇ ಪ್ರಮಾಣದ ಆಹಾರವನ್ನು ಶಾಲೆಗೆ ನೀಡುತ್ತಿರುವುದನ್ನು ಗಮನಿಸಿದರೆ ಮಕ್ಕಳ ಹಾಜರಾತಿ ಮೇಲೆ ಸಂಸ್ಥೆಗೆ ಹಣ ನೀಡುತ್ತಿಲ್ಲವೆಂಬುದು ಕಂಡು ಬಂದಿರುವುದಾಗಿ ಆಯೋಗವು ಅಭಿಪ್ರಾಯ ವ್ಯಕ್ತಪಡಿಸಿತು.

(ಕ್ರಮ:ಜಂಟಿ ನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ (ಮಧ್ಯಾಹ್ನ ಉಪಾಹಾರ ಯೋಜನೆ)

ಅಜೆಂಡಾ-5

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆ(ಐ.ಸಿ.ಡಿ.ಎಸ್):

ಆಯೋಗವು ಶಾದಾಬ್ ನಗರ-2, ವಾರ್ಡ್ ನಂ.48, ಡಿ.ಜೆ.ಹಳ್ಳಿ, ಅಂಗನವಾಡಿ ಕೇಂದ್ರಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಈ ಕೆಳಕಂಡ ನ್ಯೂನತೆಗಳನ್ನು ಗಮನಿಸಿರುತ್ತದೆ.

1) ದಾಸ್ತಾನು ವಹಿಯನ್ನು ಪೆನ್ಸಿಲ್‌ನಲ್ಲಿ ನಮೂದಿಸಿರುವುದು
2) ವೈದ್ಯರು ಮಕ್ಕಳನ್ನು ತಪಾಸಣೆ ಮಾಡಿರುವ ಬಗ್ಗೆ ದಾಖಲಾತಿಯನ್ನು ನಿರ್ವಹಿಸದಿರುವುದು.
3) ಮಕ್ಕಳನ್ನು ತೂಕ ಮಾಡಿಲ್ಲದಿರುವುದು. Growth chart ನ್ನು ನಿರ್ವಹಿಸಿಲ್ಲದೆ ಇರುವುದು.
4) ಅಂಗನವಾಡಿ ಕಾರ್ಯಕರ್ತೆಗೆ ತರಭೇತಿ ನೀಡದೇ ಇರುವುದರಿಂದ, ಮೇಲ್ಕಂಡ ವಿಷಯಗಳ ಬಗ್ಗೆ ಯಾವುದೇ ಮಾಹಿತಿ ತಿಳಿದಿಲ್ಲದಿರುವುದು.
5) ಬೆಂಗಳೂರಿನಲ್ಲಿ ಅನೇಕ ಕೊಳಚೆ ಪ್ರದೇಶಗಳಿದ್ದು ತೀವ್ರ ಅಪೌಷ್ಠಿಕತೆಯಿಂದ ಅನೇಕ ಮಕ್ಕಳು ಬಳಲುತ್ತಿದ್ದರೂ, ವಹಿಯಲ್ಲಿ ಅಪೌಷ್ಟಿಕತೆ ಮಕ್ಕಳು ಕಂಡು ಬಂದಿರುವುದಿಲ್ಲವೆಂದು NAD (No Abnormality Detected) ನಮೂದಿಸಲಾಗಿರುತ್ತದೆ. ಇದರಿಂದ ಮಕ್ಕಳ ಆರೋಗ್ಯ ತಪಾಸಣೆ ನಡೆಸಿಲ್ಲದಿರುವುದು ಕಂಡು ಬಂದಿರುತ್ತದೆ.

ಸರ್ಕಾರವು ಅನೇಕ ಯೋಜನೆಗಳನ್ನು ಅನುಷ್ಠಾನಗೊಳಿಸಿದ್ದರೂ "5 ಮಕ್ಕಳಲ್ಲಿ 2 ಮಕ್ಕಳು ಅಪೌಷ್ಠಿಕತೆಯಿಂದ ಸೊರಗುತ್ತಿದ್ದಾರೆ", "50% ಮಹಿಳೆಯರು ರಕ್ತಹೀನತೆಯಿಂದ ಬಳಲುತ್ತಿದ್ದಾರೆ", "ಕೊಪ್ಪಳದಲ್ಲಿ 56% ಕಡಿಮೆ ತೂಕದ ಮಕ್ಕಳು ಇದ್ದಾರೆ" ಎಂದು ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದೆ. ಈ ಬಗ್ಗೆ ಆಯೋಗವು ಒಂದು ವರ್ಷದಿಂದ ಸಲಹೆ ಹಾಗೂ ಸೂಚನೆಗಳನ್ನು ನೀಡುತ್ತಿದ್ದರು ಯಾವುದೇ ಸುಧಾರಣೆಗಳು ಕಂಡು ಬಂದಿರುವುದಿಲ್ಲ. ಈ ಬಗ್ಗೆ ಇಲಾಖೆಯ ಅಧಿಕಾರಿಗಳ ಗಮನಕ್ಕೆ ತಂದು ಸುಧಾರಣೆ ತರುವಂತೆಯೂ ಆಯೋಗವು ಸೂಚಿಸಿತು.

(ಕ್ರಮ: ನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ)

ಅಜೆಂಡಾ–6

ಅನ್ನ ಭಾಗ್ಯ ಯೋಜನೆ:

ಆನ್ ಲೈನ್‌ನಲ್ಲಿರುವ ಅಂತಿಮ ಶಿಲ್ಕಿಗೂ ಭೌತಿಕ ಅಂತಿಮ ಶಿಲ್ಕಿಗೂ ವ್ಯತ್ಯಾಸವಿದ್ದು, ಆನ್ ಲೈನ್‌ನಲ್ಲಿ ಅಂತಿಮ ಶಿಲ್ಕನ್ನು ನಮೂದಿಸುತ್ತಿಲ್ಲದಿರುವ ಬಗ್ಗೆ ನೀಡಿರುವ ಸಮಜಾಯಿಷಿಯು ತೃಪ್ತಿಕರವಾಗಿರುವುದಿಲ್ಲ. ಇದನ್ನು ಒಪ್ಪಲು ಬರುವುದಿಲ್ಲವೆಂದು ಆಯೋಗವು ಅಬಿಪ್ರಾಯಿಸಿತು.

ಫಲಾನುಭವಿಗಳಿಗೆ ನೀಡುತ್ತಿರುವ 7 ಕೆ.ಜಿ. ಅಕ್ಕಿಯಲ್ಲಿ 5 ಕೆ.ಜಿ. ಅಕ್ಕಿಯನ್ನು ಕೇಂದ್ರ ಸರ್ಕಾರದಿಂದ ಎನ್.ಎಫ್.ಎಸ್.ಎ. ಅಡಿ ಬರುತ್ತಿದ್ದು, 2 ಕೆ.ಜಿ. ಅಕ್ಕಿಯನ್ನು ರಾಜ್ಯ ಸರ್ಕಾರದ ಒ.ಎಂ.ಎಸ್.ಎಸ್.(ಡಿ) ಯಿಂದ ಖರೀದಿಸಲಾಗುತ್ತಿದೆ. ಪ್ರತಿ ತಿಂಗಳು ಹಂಚಿಕೆ ನೀಡಲು ಕೊರತೆಯಾಗುತ್ತಿರುವುದರಿಂದ ಮುಂದಿನ ತಿಂಗಳ ಹಂಚಿಕೆಯಲ್ಲಿ ಸರಿದೂಗಿಸಿಕೊಳ್ಳಲಾಗುತ್ತಿದೆ. ಹಿಂದಿನ ತಿಂಗಳ ಅಂತಿಮ ಶಿಲ್ಕು, ಹೊಸದಾಗಿ ಖರೀದಿಸಲಾಗಿರುವ ದಾಸ್ತಾನು, ಮುಂದಿನ ತಿಂಗಳ ಮುಂಗಡ ದಾಸ್ತಾನು ಎಲ್ಲಾ ಸೇರಿಕೊಂಡಿರುವುದರಿಂದ, ಮಾಹೆವಾರು ದಾಸ್ತಾನು tally ಆಗುತ್ತಿಲ್ಲ. ಇದರಿಂದ ಆನ್ ಲೈನ್‌ನಲ್ಲಿ ಅಂತಿಮ ಶಿಲ್ಕು ನಮೂದು ಮಾಡಲು ಸಮಸ್ಯೆಯಾಗುತ್ತಿರುವುದಾಗಿ ಜಂಟಿ ನಿರ್ದೇಶಕರು (ಸಂ.ವಿ) ರವರು ಸಭೆಯ ಗಮನಕ್ಕೆ ತಂದರು. ವಿವರಣೆಯನ್ನು ಒಪ್ಪಲು ಬರುವುದಿಲ್ಲವೆಂದು ಆಯೋಗವು ಅಭಿಪ್ರಾಯ ವ್ಯಕ್ತಪಡಿಸಿತು.

ಮಾಹೆವಾರು / ವರ್ಗವಾರು ದಾಸ್ತಾನು ಲಭ್ಯವಿರುವಂತೆ ಹೊಸ software module ನ ತಂತ್ರಾಂಶವನ್ನು ಸಿದ್ದಪಡಿಸಲಾಗುತ್ತಿದ್ದು,ಮುಂದಿನ ತಿಂಗಳಲ್ಲಿ ಆನ್‌ಲೈನ್ ಅಂತಿಮ ಶಿಲ್ಕು ನಮೂದಾಗುವಂತೆ ಕ್ರಮವಹಿಸಲಾಗುತ್ತಿದೆ ಎಂದು ಜಂಟಿ ನಿರ್ದೇಶಕರು (ಸಂ.ವಿ) ರವರು ತಿಳಿಸಿದರು.

(ಕ್ರಮ: ಜಂಟಿ ನಿರ್ದೇಶಕರು (ಸಂವಿ) ಶಾಖೆ)

ಎಸ್.ಟಿ. / ಬಿ.ಸಿ.ಎಂ. ಇಲಾಖೆ:

ಎಸ್.ಸಿ./ಎಸ್.ಟಿ./ ಬಿ.ಸಿ.ಎಂ. ಇಲಾಖೆಯ ವತಿಯಿಂದ ಸಭೆಗೆ ಯಾವುದೇ ಪ್ರತಿನಿಧಿಗಳು ಹಾಜರಿರುವುದಿಲ್ಲ. ಆದ್ದರಿಂದ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಇಲಾಖೆಯ ಕಾರ್ಯದರ್ಶಿಗಳಿಗೆ ಪತ್ರ ಬರೆಯಲು ತಿಳಿಸಲಾಯಿತು.

(ಕ್ರ.ಮ:ಸದಸ್ಯ ಕಾರ್ಯದರ್ಶಿ)

ಅಜೆಂಡಾ–7

ಸಮಾಜ ಕಲ್ಯಾಣ ಇಲಾಖೆ:-

ಹಿಂದಿನ ಸಭೆಯಲ್ಲಿ ಚರ್ಚಿಸಿದಂತೆ ಹಾಸ್ಟೆಲ್‌ಗಳ ವಿದ್ಯಾರ್ಥಿಗಳಿಗೆ ಮೂಲ ಸೌಲಭ್ಯಗಳನ್ನು ನೀಡಲು ಕುರಿತು ಕೈಗೊಂಡಿರುವ ಕ್ರಮದ ಬಗ್ಗೆ ಹಾಜರಿದ್ದ ಅಧಿಕಾರಿಗಳು ಈ ಕೆಳಕಂಡಂತೆ ವಿವರಣೆ ನೀಡಿದರು.

ಚಿತ್ತಾಪುರ ತಾಲ್ಲೂಕು ಹಾಸ್ಟೆಲ್‌ನಲ್ಲಿ ಕಂಡು ಬಂದಿದ್ದ ನ್ಯೂನತೆಗಳ ಹಿನ್ನೆಲೆಯಲ್ಲಿ ಸಂಬಂಧಪಟ್ಟವರ ಮೇಲೆ ಶಿಸ್ತು ಕ್ರಮ ಕೈಗೊಳ್ಳಲಾಗಿದೆ. ಈ ಬಗ್ಗೆ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳೊಂದಿಗೆ

ಮಾನ್ಯ ಸಚಿವರು ಸಭೆ ನಡೆಸಿ ಸೂಕ್ತ ನಿರ್ದೇಶನ ನೀಡಿರುತ್ತಾರೆ. ಶ್ರೀಮತಿ ರೇಣುಕಾ ಚಿದಂಬರಂ, ನಿವೃತ್ತ ಐ.ಎ.ಎಸ್. ಅಧಿಕಾರಿಗಳ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚಿಸಲಾಗಿರುತ್ತದೆ. Telegram app ಮೂಲಕ ವಿದ್ಯಾರ್ಥಿಗಳ ಸಮಸ್ಯೆಗಳನ್ನು ಪರಿಹರಿಸಲಾಗುತ್ತಿದೆ ಎಂದು ತಿಳಿಸಿದರು.

ಕೆ.ಎಫ್.ಸಿ.ಎಸ್.ಸಿ. ಯವರು ನೀಡಿರುವ ದಾಸ್ತಾನು ತಃಖ್ತೆಯನ್ನು ಪರಿಶೀಲಿಸಿದಾಗ, ಹಾಸ್ಟೆಲ್‌ಗೆ ನೀಡುತ್ತಿರುವ ಗೋಧಿಯನ್ನು ಎತ್ತುವಳಿ ಮಾಡದಿರುವುದು ಕಂಡು ಬಂದಿರುವುದಾಗಿ ಆಯೋಗವು ತಿಳಿಸಿತು. ಉತ್ತರ ಕರ್ನಾಟಕದ ವಿದ್ಯಾರ್ಥಿಗಳು ಗೋಧಿ ಪದಾರ್ಥವನ್ನು ತಿನ್ನಲು ಇಚ್ಚಿಸುತ್ತಾರೆ. ದಕ್ಷಿಣ ಕರ್ನಾಟಕದ ವಿದ್ಯಾರ್ಥಿಗಳು ಗೋಧಿ ಬದಲು ರಾಗಿ ಪದಾರ್ಥವನ್ನು ತಿನ್ನಲು ಇಚ್ಚಿಸುವ ಹಿನ್ನೆಲೆಯಲ್ಲಿ ಎತ್ತುವಳಿ ಮಾಡಿರುವುದಿಲ್ಲದಿರುವುದಾಗಿ ಸಭೆಯ ಗಮನಕ್ಕೆ ತಂದರು.

ಸರ್ಕಾರದಿಂದ ಉಚಿತವಾಗಿ ಬರತಕ್ಕ ಆಹಾರ ಧಾನ್ಯವನ್ನು ವ್ಯಪಗತ ಮಾಡದೇ, ಉಪಯೋಗಿಸಿಕೊಂಡು, ಮಕ್ಕಳಿಗೆ ಬಿಡುಗಡೆಯಾಗುವ ಅನುದಾನದಲ್ಲಿ ತರಕಾರಿ ಇನ್ನಿತರ ಪೌಷ್ಠಿಕಾಂಶದ ಆಹಾರವನ್ನು ನೀಡಲು ಆಯೋಗವು ಸಲಹೆ ನೀಡಿತು. ಈ ವಿಷಯವನ್ನು ಇಲಾಖೆಯ ಅಧಿಕಾರಿಗಳ ಗಮನಕ್ಕೆ ತರಲು ತಿಳಿಸಲಾಯಿತು.

ಸರ್ಕಾರವು 12 ತಿಂಗಳಿಗೂ ಸೇರಿ ಆಹಾರ ಧಾನ್ಯ ಹಂಚಿಕೆಯನ್ನು ನೀಡುತ್ತದೆ. ಎರಡು ತಿಂಗಳು ಬೇಸಿಗೆ ರಜೆಯಲ್ಲಿ ಆ ಆಹಾರ ಧಾನ್ಯವನ್ನು ಏನು ಮಾಡಲಾಗುತ್ತಿದೆ ಎಂಬ ಬಗ್ಗೆ ಮಾಹಿತಿ ನೀಡಲು ತಿಳಿಸಲಾಯಿತು. ಹಾಗೂ ಪಡೆದುಕೊಂಡಿರುವ ಆಹಾರಧಾನ್ಯಕ್ಕೆ ನಿಗಧಿತ ವೇಳೆಯಲ್ಲಿ ಉಪಯೋಗಿತಾ ಪ್ರಮಾಣ ಪತ್ರವನ್ನು ಸಲ್ಲಿಸಲು ಸೂಚಿಸಲಾಯಿತು.

(ಕ್ರಮ: ಉಪ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ)

**ಕಾನೂನು ಮಾಪನ ಶಾಸ್ತ್ರ ಇಲಾಖೆ:**

ಕಳೆದ ಎರಡು ವರ್ಷದಿಂದ ಸ್ಟಾಂಪಿಂಗ್ ಮಾಡಿಸದೇ ಇರುವ ನ್ಯಾಯಬೆಲೆ ಅಂಗಡಿಗಳ ವಿರುದ್ಧ ಇಲಾಖೆಯಿಂದ ಕ್ರಮ ಕೈಗೊಳ್ಳಲು ತಿಳಿಸಲಾಯಿತು.

ನ್ಯಾಯಬೆಲೆ ಅಂಗಡಿ / ಸಗಟು ಮಳಿಗೆ / ಎಫ್.ಸಿ.ಐ. ನಲ್ಲಿ ತೂಕದ ಯಂತ್ರಗಳಿಗೆ ಸ್ಟಾಂಪಿಂಗ್ ಮಾಡಿರುವ ಬಗ್ಗೆ ವರದಿ ನೀಡಲು ತಿಳಿಸಲಾಯಿತು.

(ಕ್ರಮ: ಉಪ ನಿಯಂತ್ರಕರು, ತೂಕ ಮತ್ತು ಅಳತೆ ಕಾನೂನು ಮಾಪನ ಶಾಸ್ತ್ರ ಇಲಾಖೆ)

ಆಯೋಗವು ಕಳೆದ ಒಂದು ವರ್ಷದಿಂದ ಅನೇಕ ಜಿಲ್ಲೆಗಳಿಗೆ ಭೇಟಿ ನೀಡಿ ಕಂಡು ಬಂದ ನ್ಯೂನತೆಗಳನ್ನು ಸರಿಪಡಿಸಿಕೊಳ್ಳುವಂತೆ ಹಾಗೂ ಕೆಲವು ಸುಧಾರಣೆಗಳನ್ನು ತರುವಂತೆ ಸಲಹೆಗಳನ್ನು ನೀಡಿ ನಡವಳಿಗಳನ್ನು ಹೊರಡಿಸುತ್ತಿರುತ್ತದೆ. ಸಂಬಂಧಪಟ್ಟ ಅಧಿಕಾರಿಗಳು ಸದರಿ ನಡಾವಳಿಗಳ ಪ್ರತಿಗಳನ್ನು ಪಡೆದು ಇಲಾಖೆಯ ಮುಖ್ಯಸ್ಥರ ಗಮನಕ್ಕೆ ತಂದು ರಾಜ್ಯ / ಜಿಲ್ಲಾ / ತಾಲ್ಲೂಕು ಹಂತಗಳಲ್ಲಿ ನಡೆಯುವ

ಸಭೆಗಳಲ್ಲಿ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಿ ಆಯೋಗವು ನೀಡಿರುವ ಸಲಹೆ, ಸೂಚನೆಗಳನ್ನು ಕಾರ್ಯಗತಗೊಳಿಸಲು ತಿಳಿಸಲಾಯಿತು. ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸದಸ್ಯ ಕಾರ್ಯದರ್ಶಿ
ಕರ್ನಾಟಕ ರಾಜ್ಯ ಆಹಾರ ಆಯೋಗ
ಹಾಗೂ ಅಪರ ನಿರ್ದೇಶಕರು-2
ಆನಾಸ & ಗ್ರಾವ್ಯ ಇಲಾಖೆ, ಬೆಂಗಳೂರು.

(ಡಾ.ಎನ್.ಕೃಷ್ಣಮೂರ್ತಿ)
ಅಧ್ಯಕ್ಷರು
ಕರ್ನಾಟಕ ರಾಜ್ಯ ಆಹಾರ ಆಯೋಗ
ಬೆಂಗಳೂರು

## ದಿನಾಂಕ:27.11.2018 ರಂದು ನಡೆದ ಕರ್ನಾಟಕ ರಾಜ್ಯ ಆಹಾರ ಆಯೋಗದ ಹದಿನೇಳನೆಯ ಸಭೆಯ ನಡವಳಿಗಳು.

*****

ಉಪಸ್ಥಿತರು :

1) ಡಾ.ಎನ್.ಕೃಷ್ಣಮೂರ್ತಿ, ಅಧ್ಯಕ್ಷರು, ಕರ್ನಾಟಕ ರಾಜ್ಯ ಆಹಾರ ಆಯೋಗ, ಬೆಂಗಳೂರು.
2) ಶ್ರೀ ವಿ.ಬಿ.ಪಾಟೀಲ್, ಸದಸ್ಯರು, ಕರ್ನಾಟಕ ರಾಜ್ಯ ಆಹಾರ ಆಯೋಗ, ಬೆಂಗಳೂರು.
3) ಶ್ರೀ ಹೆಚ್.ವಿ.ಶಿವಶಂಕರ್, ಸದಸ್ಯರು, ಕರ್ನಾಟಕ ರಾಜ್ಯ ಆಹಾರ ಆಯೋಗ, ಬೆಂಗಳೂರು.
4) ಶ್ರೀ ಹಸಬಿ.ಡಿ.ಜಿ., ಸದಸ್ಯರು, ಕರ್ನಾಟಕ ರಾಜ್ಯ ಆಹಾರ ಆಯೋಗ, ಬೆಂಗಳೂರು.
5) ಶ್ರೀ.ಬಿ.ಎ.ಮುಹಮ್ಮದ್ ಆಲಿ, ಸದಸ್ಯರು ಕರ್ನಾಟಕ ರಾಜ್ಯ ಆಹಾರ ಆಯೋಗ, ಬೆಂಗಳೂರು.
6) ಶ್ರೀಮತಿ ಮಂಜುಳಬಾಯಿ ಆರ್.ಸಾತ್‌ನೂರ್, ಸದಸ್ಯರು, ಕರ್ನಾಟಕ ರಾಜ್ಯ ಆಹಾರ ಆಯೋಗ, ಬೆಂಗಳೂರು.
7) ಶ್ರೀಮತಿ ಸುಜಾತ ಡಿ.ಹೊಸಮನಿ, ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಆಹಾರ ಆಯೋಗ ಅಪರ ನಿರ್ದೇಶಕರು-2/ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಬೆಂಗಳೂರು.
8) ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ (ಐ.ಸಿ.ಡಿ.ಎಸ್.ವಿಭಾಗ), ಬೆಂಗಳೂರು.
9) ಉಪ ಪ್ರಧಾನ ವ್ಯವಸ್ಥಾಪಕರು ಕರ್ನಾಟಕ ಆಹಾರ ನಾಗರಿಕ ಸರಬರಾಜು ನಿಗಮ ನಿಯಮಿತ, ಬೆಂಗಳೂರು.
10) ಜಂಟಿ ನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ (ಮಧ್ಯಾಹ್ನ ಉಪಾಹಾರ ಯೋಜನೆ)
11) ಸಹಾಯಕ ನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ (ಮಧ್ಯಾಹ್ನ ಉಪಾಹಾರ ಯೋಜನೆ)
12) ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ಬೆಂಗಳೂರು.
13) ಉಪ ನಿಯಂತ್ರಕರು (ಆಡಳಿತ) ಕಾನೂನು ಮಾಪನ ಶಾಸ್ತ್ರ ಇಲಾಖೆ ಬೆಂಗಳೂರು.
14) ಉಪ ನಿರ್ದೇಶಕರು ಅಲ್ಪ ಸಂಖ್ಯಾತರ ಇಲಾಖೆ.
15) ಸಹಾಯಕ ನಿರ್ದೇಶಕರು, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಬೆಂಗಳೂರು.

***

ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಆಹಾರ ಆಯೋಗರವರು ಸಭೆಯಲ್ಲಿ ಹಾಜರಿದ್ದ ಅಧ್ಯಕ್ಷರು, ಸದಸ್ಯರು ಹಾಗೂ ಎಲ್ಲಾ ಅಧಿಕಾರಿಗಳಿಗೆ ಸ್ವಾಗತವನ್ನು ಕೋರಿ ಸಭೆಯ ಅಧ್ಯಕ್ಷತೆ ವಹಿಸಲು ಮಾನ್ಯ ಅಧ್ಯಕ್ಷರನ್ನು ವಿನಂತಿಸಿದರು.

**ಅಜೆಂಡಾ – 1 :**

ದಿನಾಂಕ: 30.10.2018 ರಂದು ನಡೆದ ಸಭೆಯ ನಡವಳಿಯನ್ನು ಓದಿ ದೃಢೀಕರಿಸಲಾಯಿತು.

**ಅಜೆಂಡಾ-2**

ದಿನಾಂಕ:30.10.2018ರ ಸಭೆಯಲ್ಲಿ ತೀರ್ಮಾನಿಸಿದ ವಿಷಯಗಳ ಬಗ್ಗೆ ತೆಗೆದುಕೊಂಡ ಕ್ರಮಗಳನ್ನು ಮತ್ತು ಅನುಸರಣಾ ವರದಿಯನ್ನು ಪರಿಶೀಲಿಸಲಾಯಿತು. ಈ ಸಂದರ್ಭದಲ್ಲಿ ಆಯೋಗದ ಸಭೆಗೆ ಆರೋಗ್ಯ ಇಲಾಖೆ, ಹಿಂದುಳಿದ ವರ್ಗಗಳ ಇಲಾಖೆ ಹಾಗೂ ಅಲ್ಪಸಂಖ್ಯಾತರ ಇಲಾಖೆಯ ಅಧಿಕಾರಿಗಳ ಗೈರು ಹಾಜರಿಯನ್ನು ಗಮನಿಸಿದ ಆಯೋಗ ತೀವ್ರ ಅಸಮಧಾನ ವ್ಯಕ್ತಪಡಿಸಿತು. ಪ್ರಾರಂಭದಿಂದಲೂ ಸಭಾ ಸೂಚನಾ ಪತ್ರಗಳನ್ನು ಕಳುಹಿಸಿದರೂ, ಸಂಬಂಧಪಟ್ಟ ಸರ್ಕಾರದ ಇಲಾಖಾ ಕಾರ್ಯದರ್ಶಿಗಳಿಗೆ ಪತ್ರ ಬರೆದರೂ, ಈ ಇಲಾಖೆಗಳ ಯಾವುದೇ ಅಧಿಕಾರಿ ಆಯೋಗದ ಸೂಚಿತ ಸಭೆಗಳಿಗೆ ಹಾಜರಾಗದಿರುವುದು ಗಂಭೀರ ಲೋಪವಾಗಿದ್ದು, ಈ ಕುರಿತು ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಪತ್ರ ಬರೆಯಲು ಸೂಚಿಸಲಾಯಿತು.

(ಕ್ರಮ ಆಯೋಗದ ಸದಸ್ಯ ಕಾರ್ಯದರ್ಶಿ)

**ಅಜೆಂಡಾ-3 : ಕೆ.ಎಫ್.ಸಿ.ಎಸ್.ಸಿ**

ನಿಗಮದ ಗೋದಾಮುಗಳಲ್ಲಿ ದಾಸ್ತಾನನ್ನು ವೈಜ್ಞಾನಿಕವಾಗಿ ಜೋಡಿಸುತ್ತಿಲ್ಲವೆಂದು, ವುಡನ್ ಕ್ರೇಟ್ಸ್ ಹಾಕುತ್ತಿಲ್ಲವೆಂದು ಆಯೋಗವು ಪ್ರತಿ ಸಭೆಯಲ್ಲಿಯೂ ಹೇಳಲಾಗುತ್ತಿದೆ ಆದರೂ ಕೆ.ಎಫ್.ಸಿ.ಎಸ್.ಸಿಯವರು ಪ್ರತಿ ಸಭಾನಡವಳಿಯ ಅನುಪಾಲನಾ ವರದಿಯಲ್ಲಿಯೂ ವುಡನ್ ಕ್ರೇಟ್ಸ್‌ನ್ನು ನಿಗಮದ ಎಲ್ಲಾ ಗೋದಾಮುಗಳಲ್ಲೂ ಬಳಸುವ ಬಗ್ಗೆ ಪತ್ರ ಬರೆಯಲಾಗಿದೆ ಎಂದೇ ಹೇಳಲಾಗುತ್ತಿದೆ. ಯಾವುದೇ ಕ್ರಮವಹಿಸಿಲ್ಲ. ಇದನ್ನು ಗಮನಿಸಿದಾಗ ಗೋದಾಮುಗಳಲ್ಲಿ ದಾಸ್ತಾನು ಶೇಖರಣೆಗೆ ವುಡನ್ ಕ್ರೇಟ್ಸ್ ಬಳಸಲು ಇಚ್ಛೆ ಇಲ್ಲವೆಂದೆನಿಸುತ್ತಿದೆ. ಆಯೋಗವು ಜುಲೈ 2017ರಲ್ಲಿ ಯಶವಂತಪುರ ಆಹಾರ ಗೋದಾಮಿಗೆ ಭೇಟಿ ನೀಡಿದಾಗ ಅಲ್ಲಿ ಬಹಳ ವುಡನ್ ಕೇಟ್ಸ್‌ಗಳು ಇದ್ದರೂ ಸಹ ಉಪಯೋಗಿಸದೆ ಇರುವುದು ಕಂಡುಬಂದಿತು. ಇಲ್ಲಿರುವ ವುಡನ್ ಕ್ರಟ್ಸ್‌ಗಳನ್ನು ಉಪಯೋಗಿಸಲು ಸೂಚನೆ ನೀಡಿದರು ಸಹ ಇದುವರೆಗೆ ಅದನ್ನು ಉಪಯೋಗಿಸಿರುವುದಿಲ್ಲ. ಸರ್ಕಾರದಿಂದ ಬಿಡುಗಡೆಯಾಗುವ ಆಹಾರ ದಾಸ್ತಾನು ಹಾಳಾಗುವುದಕ್ಕೆ ಕೆ.ಎಫ್.ಸಿ.ಎಸ್.ಸಿ ನಿಗಮವೇ ಕಾರಣವಾಗುತ್ತದೆ. ಹಾಗೂ ಸಂಬಂಧಪಟ್ಟವರ ವಿರುದ್ಧ ಕ್ರಮಕೈಗೊಳ್ಳುವಂತೆ ಆಯೋಗವು ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕಾಗುತ್ತದೆಯೆಂದು ತಿಳಿಸಲಾಯಿತು.

ಮುಂದಿನ ಸಭೆಯ ವೇಳೆಗೆ ಕೆ.ಎಫ್.ಸಿ.ಎಸ್.ಸಿ ನಿಗಮವು ಯಾವುದೇ ಕಾರಣ ಹೇಳಬಾರದು ಮತ್ತು ಆಹಾರ ದಾಸ್ತಾನಿನ ಶೇಖರಣೆ ಬಗ್ಗೆ ಎಲ್ಲಾ ಅಗತ್ಯ ಕ್ರಮ ಜರುಗಿಸಬೇಕೆಂದು ಕೆ.ಎಫ್.ಸಿ.ಎಸ್.ಸಿ ಯವರಿಗೆ ಆಯೋಗವು ತಿಳಿಸಿತು. ಆಯೋಗವು ಚಿತ್ರದುರ್ಗ ಜಿಲ್ಲೆಗೆ ಭೇಟಿ ನೀಡಿದ್ದ ಸಮಯದಲ್ಲಿ ಜಿಲ್ಲೆಯ ಕೆ.ಎಫ್.ಸಿ.ಎಸ್.ಸಿಯಲ್ಲಿ ಕಂಡು ಬಂದ ಆಹಾರ ದಾಸ್ತಾನು ಶೇಖರಣೆ ಬಗ್ಗೆ ಚರ್ಚಿಸಿತು.

ಸಾರ್ವಜನಿಕ ಪದ್ಧತಿಯಡಿ ಬಿಡುಗಡೆಯಾಗುವ ರಾಗಿ ಹಂಚಿಕೆ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸಹಾಯಕ ನಿರ್ದೇಶಕರು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ರವರೊಂದಿಗೆ ಡಿಸಂಬರ್ ಮಾಹೆಗೆ ರಾಗಿ ಬಿಡುಗಡೆ ಬಗ್ಗೆ ಚರ್ಚೆ ನಡೆಸಿತು. ರಾಗಿ ಅಂತಿಮ ಆದೇಶವಾಗಿಲ್ಲವೆಂದು ಸಹಾಯಕ ನಿರ್ದೇಶಕರು ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಬೆಂಗಳೂರು ಹೇಳಿದರು.

(ಕ್ರಮ: ಪ್ರಧಾನ ವ್ಯವಸ್ಥಾಪಕರು ಕೆ.ಎಫ್.ಸಿ.ಎಸ್.ಸಿ)

ಅಜೆಂಡಾ: 4

**ಮಧ್ಯಾಹ್ನ ಉಪಹಾರ ಯೋಜನೆಯ ಪರಿಣಾಮಕಾರಿ ಅನುಷ್ಠಾನದ ಬಗ್ಗೆ:**

ಮಧ್ಯಾಹ್ನ ಉಪಹಾರ ಯೋಜನೆಯಡಿಯ ಶಾಲೆಗಳ ಮಕ್ಕಳಿಗೆ ನೀಡಲಾಗುತ್ತಿರುವ ಆಹಾರ ಪೌಷ್ಠಿಕಾಂಶದ ಬಗ್ಗೆ ಚರ್ಚಿಸಲಾಯಿತು. ಹಿಂದಿನ ಸಭೆಗಳಲ್ಲಿ ಚರ್ಚಿಸಿದಂತೆ, ಶಾಲಾ ಮಕ್ಕಳಿಗೆ ನೀಡಲಾಗುವ ಆಹಾರವು ಶುಚಿ, ರುಚಿಯಿಂದಿರಬೇಕು, ಪೌಷ್ಠಿಕಾಂಶ ಆಹಾರ ಕೊಡಬೇಕು ಹಾಗೂ ಆಹಾರ ಪೌಷ್ಠಿಕಾಂಶದ ಬಗ್ಗೆ ಮೊದಲು ಪರಿಶೀಲನೆ ಕಾರ್ಯವಾಗಬೇಕೆಂದು ಆಯೋಗವು ಈ ಸಭೆಯಲ್ಲಿಯೂ ಹಾಜರಿದ್ದ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದರು.

ಅಕ್ಷಯಪಾತ್ರೆ ಯೋಜನೆಯಡಿ ಎಷ್ಟು ಶಾಲೆಗಳಿಗೆ ಆಹಾರ ನೀಡಲಾಗುತ್ತಿದೆ, ಶಾಲೆಗಳಿಂದ ಆಹಾರ ಸ್ಯಾಂಪಲ್ ತೆಗೆದುಕೊಂಡು ಪೌಷ್ಠಿಕತೆಯ ಬಗ್ಗೆ ಪರಿಶೀಲನಾ ಕಾರ್ಯ ನಡೆಸಿದೆಯೇ ಎಂದು ಆಯೋಗದವರು ಪ್ರಶ್ನಿಸಿದರು.

ಇಸ್ಕಾನ್ ಸಂಸ್ಥೆಯಿಂದ ಶಾಲಾ ಮಕ್ಕಳಿಗೆ ನೀಡಲಾಗುತ್ತಿರುವ ಮಧ್ಯಾಹ್ನ ಉಪಾಹಾರ ಹಾಗೂ ಇತರೆ ಸಂಸ್ಥೆಗಳಿಂದ (ಅದಮ್ಯ ಚೇತನ) ಮಕ್ಕಳಿಗೆ ನೀಡಲಾಗುವ ಆಹಾರದ ಪೌಷ್ಠಿಕಾಂಶವನ್ನು ಪರಿಶೀಲಿಸಿದಾಗ ಅದರಲ್ಲಿ ಹೆಚ್ಚಿನ ಗುಣಮಟ್ಟದ ಆಹಾರ ಯಾರು ಶಾಲಾ ಮಕ್ಕಳಿಗೆ ನೀಡುತ್ತಿದ್ದಾರೆ ಎಂಬ ಈ ಬಗ್ಗೆ ಹೆಚ್ಚಿನ ಮಾಹಿತಿ ನೀಡುವಂತೆ ಆಯೋಗವು ಸೂಚಿಸಿತು.

ಆಯೋಗವು ಸಾರ್ವಜನಿಕ ಶಿಕ್ಷಣ ಇಲಾಖೆಗೆ ಮತ್ತು ಮಕ್ಕಳಿಗೆ ಆಹಾರ ಸರಬರಾಜು ಮಾಡುತ್ತಿರುವ ಸಂಸ್ಥೆಗಳ ಮಧ್ಯೆ ಇರುವ ಎಂ.ಒ.ಯು ನೀಡಲು ಸೂಚಿಸಿದ್ದು, ಇದುವರೆಗೂ ನೀಡಿರುವುದಿಲ್ಲ. ಎಲ್ಲಾ ಎಂ.ಒ.ಯು ಗಳನ್ನು ತಕ್ಷಣ ಆಯೋಗಕ್ಕೆ ನೀಡಲು ಸೂಚಿಸಿದೆ.

ಹಿಂದಿನ ಸಭೆಯ ನಡವಳಿಗೆ ಸಂಬಂಧಿಸಿದಂತೆ ಆಯೋಗಕ್ಕೆ ಸಲ್ಲಿಸಿರುವ ಅನುಪಾಲನಾ ವರದಿಯಲ್ಲಿ ಮಕ್ಕಳಿಗೆ ನೀಡಲಾಗುವ ಆಹಾರದ ಪಟ್ಟಿಯಲ್ಲಿ (Ingredients) ಈರುಳ್ಳಿ/ಬೆಳ್ಳುಳ್ಳಿಯನ್ನು ಸೇರಿಸುವಂತೆ ಕರಾರು ಒಪ್ಪಂದ ಮಾಡಲಾಗಿದೆಯೆಂದು ಈರುಳ್ಳಿ/ಬೆಳ್ಳುಳ್ಳಿ ಬಳಸುವವರೆಗೆ ಬಿಲ್‌ಪಾಸ್ ಮಾಡುವುದಿಲ್ಲವೆಂದು ಸಭೆಗೆ ಹಾಜರಿದ್ದ ಜಂಟಿನಿರ್ದೇಶಕರು,(ಸಾರ್ವಜನಿಕ ಶಿಕ್ಷಣ ಇಲಾಖೆ) ಮಧ್ಯಾಹ್ನ ಉಪಾಹಾರ ಯೋಜನೆ ಇವರು ತಿಳಿಸಿದರು.

ಸುಮಾರು 15-16 ವರ್ಷಗಳಿಂದ ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ಶಾಲಾ ಮಕ್ಕಳಿಗೆ ಮಧ್ಯಾಹ್ನ ಉಪಾಹಾರ ಯೋಜನೆಯಡಿಯಲ್ಲಿ ಆಹಾರ ನೀಡುವ ಕ್ರಮ ಜಾರಿಯಲ್ಲಿರುತ್ತದೆ. ಆದರೆ ಈವರೆವಿಗೆ ಮಕ್ಕಳಿಗೆ ನೀಡುವ ಆಹಾರ ಪೌಷ್ಠಿಕಾಂಶದ ಬಗ್ಗೆ ಇಲಾಖೆಯು ಚಿಂತನೆ ಮಾಡಿಲ್ಲ, ಈಗ ಆಯೋಗವು ಸದರಿ ವಿಷಯವನ್ನು ಚರ್ಚೆಗೆ ತೆಗೆದುಕೊಂಡಿದೆಯೆಂದು ಆಯೋಗದ ಸದಸ್ಯರು ಸಭೆಯಲ್ಲಿ ತಿಳಿಸಿದರು.\

ಹಿಂದಿನ ಸಭೆಯಲ್ಲಿ ಚರ್ಚಿಸಿದಂತೆ, ಶಾಲಾ ಮಕ್ಕಳಿಗೆ (ಅಕ್ಷಯ ಪಾತ್ರೆ ಮೂಲಕ) ನೀಡಲಾಗುತ್ತಿರುವ ತಣ್ಣನೆಯ ಹಾಲು ಮಕ್ಕಳು ಕುಡಿಯಲಾಗುತ್ತಿಲ್ಲ. ಹಾಲಿಗೆ ಬಾದಾಮಿಪುಡಿ, ಸಕ್ಕರೆ ಇವುಗಳನ್ನು ಬೆರೆಸಿ ಬಿಸಿಮಾಡಿದ ಹಾಲನ್ನು ತಣ್ಣಗಾಗಿಸಿ ನಂತರ ಪ್ಯಾಕ್ ಮಾಡಲಾಗಿರುತ್ತಾದ್ದರಿಂದ ಅದನ್ನು ಪುನಃ ಬಿಸಿ ಮಾಡಿದಲ್ಲಿ ಅದು ಹಾಳಾಗುವುದರಿಂದ, ಮಕ್ಕಳಿಗೆ ತಣ್ಣನೆ ಹಾಲು ನೀಡಲಾಗುತ್ತದೆ ಇನ್ನು ಮುಂದೆ ಹಾಲನ್ನು ಶಾಲೆಯಲ್ಲಿಯೇ ಕಾಯಿಸಿ ಕೊಡುವ

ವ್ಯವಸ್ಥೆಯನ್ನು ಮಾಡಲು ಸಿಇಒ ರವರಿಗೆ ತಿಳಿಸಲಾಗಿದೆಯೆಂದು ಜಂಟಿನಿರ್ದೇಶಕರು, ಮಧ್ಯಾಹ್ನ ಉಪಾಹಾರ ಯೋಜನೆ ರವರು ಆಯೋಗದ ಗಮನಕ್ಕೆ ತಂದರು.

ಚರ್ಚೆ ಮುಂದುವರೆದಂತೆ, ಮಕ್ಕಳಿಗೆ ನೀಡಲಾಗುತ್ತಿರುವ ಆಹಾರ ಪ್ರಮಾಣದ ಬಗ್ಗೆ ಚರ್ಚೆಯಾಯಿತು. ಮಕ್ಕಳಿಗೆ ನೀಡಲಾಗುವ 1 1/4 ಬಾಕ್ಸ್ ಬಗ್ಗೆ ಅಧಿಕಾರಿಗಳು ಆಯೋಗಕ್ಕೆ ವಿವರಿಸಿದರು. 100 ಗ್ರಾಂ ಅಕ್ಕಿ ಬೇಯಿಸಿದ ನಂತರ ಅದರ ಪ್ರಮಾಣ ಹೆಚ್ಚಾಗುತ್ತದೆ. ಮಕ್ಕಳಿಗೆ ಆಹಾರವನ್ನು ನೀಡುವಾಗ ಮಕ್ಕಳ ಹಾಜರಾತಿ ಆಧರಿಸಿ ನೀಡುವಂತೆ ಉದಾಹರಣೆಗೆ:ಒಂದು ಶಾಲೆಯಲ್ಲಿ 150 ಮಕ್ಕಳಿದ್ದರೆ ಕೇವಲ 100 ಮಕ್ಕಳಿಗಾಗುವಷ್ಟು ಆಹಾರ ಮಾತ್ರ ಸರಬರಾಜಾದರೆ ಆಗ ಮಕ್ಕಳಿಗೆ ಆಹಾರ ಕೊರತೆಯಾಗುತ್ತದೆ. ಅರೆಹೊಟ್ಟೆಯಾಗುತ್ತದೆ ಒಟ್ಟಿನಲ್ಲಿ ಮಕ್ಕಳಿಗೆ ಶುಚಿ/ರುಚಿಯಾದ ಪೌಷ್ಠಿಕ ಆಹಾರವನ್ನು ನೀಡಿ ಎಂದು ಆಯೋಗವು ಒತ್ತಿ ಹೇಳಿತು.

ಸಭೆಯ ಮಧ್ಯದಲ್ಲಿ ಆಯೋಗವು ಚಿತ್ರದುರ್ಗ ಜಿಲ್ಲೆಗೆ ಭೇಟಿ ನೀಡಿದ ಸಮಯದಲ್ಲಿ ಆ ಜಿಲ್ಲೆಯ ನಾಯಕನ ಹಟ್ಟಿ ಗ್ರಾಮದ ಶಾಲಾ ಮಕ್ಕಳಿಗೆ ನೀಡಲಾಗುತ್ತಿರುವ ಆಹಾರದ ಬಗ್ಗೆ ಶ್ಲಾಘಿಸಿತು. ಹಾಗೂ ಶಾಲೆಯಲ್ಲಿ ನಿರ್ವಹಿಸಿರುವ ದಾಸ್ತಾನು ಪುಸ್ತಕ, ಲೆಕ್ಕವಹಿ ನಿರ್ವಹಣೆ ಕೂಡ ಸರಿಯಾಗಿರುತ್ತದೆ. ಮಕ್ಕಳ ಹಾಜರಾತಿ ಕೂಡ 100 ಶೇಕಡಾ ಇದ್ದ, ಇದೇ ರೀತಿ ಎಲ್ಲಾ ಶಾಲೆಯಲ್ಲಿಯೂ, ಮಕ್ಕಳ ಹಾಜರಾತಿ, ಆಹಾರ ಹಂಚಿಕೆ, ಇದೆಲ್ಲದರ ಬಗ್ಗೆ ಹೆಚ್ಚಿನ ಸುಧಾರಣೆಗಳಾಗಬೇಕಿದೆ. ಈ ವಿಷಯವನ್ನು ಇಲಾಖಾ ಮುಖ್ಯಸ್ಥರ ಗಮನಕ್ಕೆ ತರುವಂತೆ ಆಯೋಗವು ತಿಳಿಸಿತು.

ಮಧ್ಯಾಹ್ನದ ಉಪಾಹಾರ ಯೋಜನೆ ಅಡಿಯಲ್ಲಿ ಯಾವ ಯಾವ ಸಂಘ ಸಂಸ್ಥೆಗಳ ಮುಖಾಂತರ ಆಹಾರವನ್ನು ಮಕ್ಕಳಿಗೆ ಸರಬರಾಜು ಮಾಡಲಾಗುತ್ತಿದೆ. ಅವುಗಳ ವಿವರ ಮತ್ತು ಎಂ.ಒ.ಯುಗಳನ್ನು ಆಯೋಗಕ್ಕೆ ನೀಡಲು ಸೂಚಿಸಲಾಯಿತು.

**(ಕ್ರಮ:ಜಂಟಿ ನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ /ಮಧ್ಯಾಹ್ನ ಉಪಾಹಾರ ಯೋಜನೆ)**

**ಅಜೆಂಡಾ-5**

**ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆ(ಐ.ಸಿ.ಡಿ.ಎಸ್):**

ದಿನಾಂಕ:30.10.2018 ರಂದು ನಡೆದ ಆಯೋಗದ ಮಾಸಿಕ ಸಭೆಯಲ್ಲಿ ಆಯೋಗವು ವ್ಯಕ್ತಪಡಿಸಿದ್ದ ಅಸಮಧಾನಕ್ಕಾಗಿ ಒಂದು ಸುತ್ತೋಲೆಯನ್ನು ನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರು ಹೊರಡಿಸಿರುತ್ತಾರೆಂದು ಸಭೆಯಲ್ಲಿ ಹಾಜರಿದ್ದ ಅಧಿಕಾರಿಯು ಸಭೆಗೆ ತಿಳಿಸಿದರು. ಆದರೆ ಆಯೋಗವು ಈ ಕೇವಲ ಒಂದು ಸುತ್ತೋಲೆಗೆ ಸೀಮಿತವಾದ ಅನುಸರಣಾ ವರದಿಯನ್ನು ಒಪ್ಪಿರುವುದಿಲ್ಲ. ಇಂತಹ ಅನೇಕ ಸರ್ಕಾರಿ ಆದೇಶಗಳು ಹಾಗೂ ಸುತ್ತೋಲೆಗಳು ಈಗಾಗಲೇ ಅಧಿಕೃತವಾಗಿ ಜಾರಿಯಲ್ಲಿದ್ದು, ಅವುಗಳನ್ನು ಪಾಲಿಸದೇ ಇರುವುದರಿಂದಾಗಿಯೇ ಈ ಇಲಾಖೆಯಲ್ಲಿ ಅವ್ಯವಸ್ಥೆಯು ಮುಂದುವರಿದಿರುತ್ತದೆ. ಜಿಲ್ಲಾ ಮಟ್ಟದ ಉಪನಿರ್ದೇಶಕರು, ತಾಲ್ಲೂಕು ಮಟ್ಟದ ಸಿಡಿಪಿಒ ರವರು ಹಾಗೂ ಮೇಲ್ವಿಚಾರಕರುಗಳು ತಮ್ಮ ಕರ್ತವ್ಯಗಳನ್ನು ಸರಿಯಾಗಿ ನಿಭಾಯಿಸಿದಲ್ಲಿ ಮಾತ್ರ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಉದ್ದೇಶಗಳು ಈಡೇರಲು ಸಾಧ್ಯ.

ಅಂಗನವಾಡಿ ವ್ಯಾಪ್ತಿಯಲ್ಲಿ 6 ವರ್ಷದ ಒಳಗಿನ ಮಕ್ಕಳು ಬರುತ್ತಿದ್ದು, ಈ ಅವಧಿಯಲ್ಲಿ ಈ ಮಕ್ಕಳಿಗೆ ಕಾಯ್ದೆಯಲ್ಲಿ ರೂಪಿಸಿದಂತಹ ಪೌಷ್ಠಿಕಾಂಶಗಳು ದೊರಕುವುದು ಅತೀ ಅವಶ್ಯ. ಅಪೌಷ್ಠಿಕ ಮಕ್ಕಳು ಮುಂದೆ ಸಮಾಜಕ್ಕೆ ಹಾಗೂ ದೇಶಕ್ಕೆ ಹೊರೆಯಾಗುವ ಸಾಧ್ಯತೆ ಇರುತ್ತದೆ. ಆದ್ದರಿಂದ ಯಾವುದೇ ಕಾರಣಕ್ಕೂ ಯಾವುದೇ ಒಂದು ಮಗು ಅಪೌಷ್ಠಿಕತೆಯಿಂದ ನರಳುವುದು ಇಲಾಖೆಯ ಕರ್ತವ್ಯ ಚ್ಯುತಿಯೆಂದು ಭಾವಿಸಿಬಹುದಾಗಿದೆ.

ತೀವ್ರ ಅಪೌಷ್ಠಿಕತೆಯಿಂದ ಬಳಲುತ್ತಿರುವ ಮಕ್ಕಳ ಆರೈಕೆಗಾಗಿಯೇ ಜಿಲ್ಲಾ ಮಟ್ಟದಲ್ಲಿ ಎನ್.ಆರ್.ಸಿ ಗಳನ್ನು ಸ್ಥಾಪಿಸಲಾಗಿದ್ದು, ಇಲ್ಲಿ ಮಕ್ಕಳಿಗೆ ಸೂಕ್ತ ಚಿಕಿತ್ಸೆ ನೀಡಲಾಗುತ್ತಿರುವುದನ್ನು ಆಯೋಗವು ಜಿಲ್ಲೆಗಳಿಗೆ ಭೇಟಿ ನೀಡಿದಾಗ ಪರಿಶೀಲನೆ ಮಾಡಿ ಮನವರಿಕೆ ಮಾಡಿಕೊಂಡಿರುತ್ತದೆ. ಆದರೆ ವಿಷಾದದ ಸಂಗತಿ ಏನೆಂದರೆ ಈ ಎನ್.ಆರ್.ಸಿಗಳಲ್ಲಿ ಇರುವ ಸವಲತ್ತುಗಳನ್ನು ಪೂರ್ಣ ಪ್ರಮಾಣದಲ್ಲಿ ಉಪಯೋಗಿಸಿಕೊಳ್ಳಲಾಗುತ್ತಿರುವುದಿಲ್ಲ. ಈ ಎನ್.ಆರ್.ಸಿಗಳಲ್ಲಿ ಚಿಕಿತ್ಸೆಗಾಗಿ ದಾಖಲಿಸುವ ಮಕ್ಕಳು ಶೇಕಡ 95% ರಷ್ಟು ಆಯಾ ಆಸ್ಪತ್ರೆಗಳ ಹೊರರೋಗಿಗಳ ವಿಭಾಗದಿಂದಲೇ ಗುರುತಿಸಲ್ಪಟ್ಟವರಾಗಿರುತ್ತಾರೆ. ತೀವ್ರ ಅಪೌಷ್ಠಿಕತೆಯಿಂದ ನರಳುತ್ತಿರುವ ಹಾಗೂ ಸಾಮಾನ್ಯ ಅಪೌಷ್ಠಿಕತೆಯಿಂದ ನರಳುತ್ತಿರುವ ಮಕ್ಕಳ ಸಂಖ್ಯೆಯು ಒಟ್ಟು ಮಕ್ಕಳ ಸಂಖ್ಯೆಯ ಶೇಕಡ 25 ರಿಂದ 30 ರಷ್ಟು ಇದೆಯೆಂದು ಇಲಾಖೆಯು ನೀಡಿದ ಅಂಕಿ-ಅಂಶಗಳಿಂದಲೇ ಸ್ಪಷ್ಟವಾಗುತ್ತದೆ.

ಮೊದಲನೇ ಹಂತದಲ್ಲಿ ತೀವ್ರ ಅಪೌಷ್ಠಿಕತೆಯಿಂದ ನರಳುತ್ತಿರುವ ಎಲ್ಲಾ ಮಕ್ಕಳನ್ನು ಸಾಮಾನ್ಯ ಸ್ಥಿತಿಗೆ ತರುವುದು ಇಲಾಖೆಯ ಪ್ರಥಮ ಆದ್ಯತೆ ಆಗಬೇಕು. ಇದಕ್ಕೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಹಾಗೂ ಆರೋಗ್ಯ ಇಲಾಖೆಯು ಒಟ್ಟುಗೂಡಿ ಕಾರ್ಯ ನಿರ್ವಹಿಸಬೇಕು. ಸಾವಿರಾರು ಸಂಖ್ಯೆಯಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಆಶಾ ಕಾರ್ಯಕರ್ತೆಯರು ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿದ್ದರೂ, ಈ ಅಂಶವನ್ನು ನಿರ್ಲಕ್ಷಿಸಲಾಗಿರುವುದನ್ನು ಆಯೋಗವು ಗಂಭೀರವಾಗಿ ಪರಿಗಣಿಸುತ್ತದೆ ಮತ್ತು ಈ ಎರಡೂ ಇಲಾಖೆಗಳನ್ನು ಹೊಣೆಯಾಗಿಸುತ್ತದೆ.

ಮಾರ್ಚ್ 31, 2019ರ ಒಳಗಾಗಿ ರಾಜ್ಯದಲ್ಲಿ ಯಾವೊಂದು ಮಗುವು ತೀವ್ರ ಅಪೌಷ್ಠಿಕತೆಗೆ ಒಳಗಾಗದೇ ಇರುವಂತೆ ಈ ಎರಡೂ ಇಲಾಖೆಗಳು ಕ್ರಮವಹಿಸಬೇಕೆಂದು ಆಯೋಗವು ಅಗ್ರಹಿಸುತ್ತದೆ. ಈ ನಿಟ್ಟಿನಲ್ಲಿ ಸಾಧಿಸಿದ ಪ್ರಗತಿಯನ್ನು ಪ್ರತೀ ಹದಿನೈದು ದಿವಸಗಳಿಗೊಮ್ಮೆ ಆಯೋಗಕ್ಕೆ ಸಲ್ಲಿಸಬೇಕೆಂದು ಸೂಚಿಸುತ್ತದೆ. ಈ ನಿಗಧಿಪಡಿಸಿದ ದಿನಾಂಕದೊಳಗೆ ಈ ಗುರಿ ಸಾಧಿಸದಿದ್ದಲ್ಲಿ ಈಗಾಗಲೇ ಸರ್ವೋಚ್ಚ ನ್ಯಾಯಾಲಯದಲ್ಲಿ ನಡೆಸುತ್ತಿರುವ ಪ್ರಕರಣದಲ್ಲಿ ರಾಜ್ಯ ಸರ್ಕಾರಕ್ಕೆ ತೀವ್ರ ಮುಖ ಭಂಗವಾಗುವ ಸಾಧ್ಯತೆ ಇದೆ. ಕಾರಣ ಈ ವಿಷಯವನ್ನು ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಗಮನಕ್ಕೆ ತರುವುದು ಅನಿವಾರ್ಯವಾಗುತ್ತದೆ ಎಂದು ತಿಳಿಸಲಾಯಿತು.

(ಕ್ರಮ: ನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಮತ್ತು ಆರೋಗ್ಯ ಇಲಾಖೆ)

**ಅಜೆಂಡಾ–6**

**ಅನ್ನ ಭಾಗ್ಯ ಯೋಜನೆ:**

ಸಾರ್ವಜನಿಕ ವಿತರಣಾ ಪದ್ಧತಿಯಡಿ ಪಡಿತರ ವಿತರಣೆಗೆ ಸರ್ಕಾರದಿಂದ ಬಿಡುಗಡೆಯಾಗುವ ಆಹಾರಧಾನ್ಯವನ್ನು ಇಲಾಖೆಯಲ್ಲಿ ಸಗಟುಮಳಿಗೆವಾರು ಹಂಚಿಕೆ ಬಿಡುಗಡೆ ಮಾಡುತ್ತಿದ್ದು, ಪ್ರತಿ ಮಾಹೆ ಅಂದರೆ ಆಹಾರಧಾನ್ಯ ಹಂಚಿಕೆ ಸಮಯಕ್ಕೆ, ಮಾಹೆಯ ಅಂತ್ಯಕ್ಕೆ ಒಂದುಬಾರಿ, ಹೀಗೆ ಎರಡುಬಾರಿ ಅಂತಿಮ ಶಿಲ್ಕನ್ನು ಪಡೆಯುತ್ತಿದೆ. ಇದರಿಂದ ಆಹಾರ ಧಾನ್ಯ ದುರುಪಯೋಗ ಆಗುವ ಸಾಧ್ಯತೆಯಿದೆ. ಈ ಕ್ರಮವನ್ನು ಸರಿಪಡಿಸಿಕೊಳ್ಳಲಾಗುವಿದಿಲ್ಲವೆ? ಎಂದು ಆಯೋಗವು ಪ್ರಶ್ನಿಸಿತು. ಇದಕ್ಕೆ ಸಭೆಯಲ್ಲಿ ಹಾಜರಿದ್ದ ಸದಸ್ಯ ಕಾರ್ಯದರ್ಶಿಯವರು ಹಂಚಿಕೆ ಬಗ್ಗೆ ವಿವರಿಸಿದ್ದರು. ಮೊದಲು ಕಾರ್ಡುಗಳಿಗನುಗುಣವಾಗಿ ಸಗಟು ಗೋದಾಮುಗಳಿಗೆ ವಿತರಣಾ ಪ್ರಮಾಣವನ್ನು ನೀಡಲಾಗುತ್ತದೆ. (Scale of issue) ನಂತರದಲ್ಲಿ ನ್ಯಾಯಬೆಲೆ ಅಂಗಡಿಯವರು ಆಹಾರ ಗೋದಾಮಿನಿಂದ ಪಡಿತರ ಎತ್ತುವಳಿ ಮಾಡುವಾಗ ನ್ಯಾಯಬೆಲೆ ಅಂಗಡಿಯವರು ಮಾಹೆಯ ಅಂತ್ಯಕ್ಕೆ ತೋರಿಸಲಾಗಿರುವ ಅಂತಿಮ ಶಿಲ್ಕು ಪ್ರಮಾಣವನ್ನು ಕಡಿತಗೊಳಿಸಿಯೇ ಅವರಿಗೆ ಸಗಟು ಮಳಿಗೆಯವರು ಪಡಿತರ ವಿತರಣೆ ಮಾಡುತ್ತಾರೆಂದು, ಸದಸ್ಯ ಕಾರ್ಯದರ್ಶಿಯವರು ಕೆ.ಎಫ್.ಸಿ.ಎಸ್.ಸಿ ಯವರು ತಿಳಿಸಿದರು.

ಎಲ್ಲಾ ನ್ಯಾಯಬೆಲೆ ಅಂಗಡಿಗಳಲ್ಲಿಯೂ POS ಅಳವಡಿಸಿರುವುದರಿಂದ ಕಾರ್ಡುದಾರರಿಗೆ ವಿತರಣೆಯಾಗುವ ಪಡಿತರದಲ್ಲಿ ಯಾವುದೇ ದುರುಪಯೋಗವಾಗುವುದಿಲ್ಲವೆಂದು, ಸಭೆಯಲ್ಲಿ ಹಾಜರಿದ್ದ ಸಹಾಯಕ ನಿರ್ದೇಶಕರು(ಸಂವಿ) ರವರು ವಿವರಿಸಿದರು.

ಆದರೂ ಸಗಟು ಗೋದಾಮುಗಳ ಉಳಿಕೆ ದಾಸ್ತಾನು ವಿವರವನ್ನು Manual ಪಡೆಯುತ್ತಿರುವುದರಿಂದ ಮಾಹೆವಾರು ಅಂತಿಮಶಿಲ್ಕು ದಾಸ್ತಾನು ವಿವರದಲ್ಲಿ ವ್ಯತ್ಯಾಸವಾಗಬಹುದು. ಆದ್ದರಿಂದ ಈ ಕ್ರಮವನ್ನು ಕೈಬಿಡಬೇಕೆಂದು, ಆನ್‌ಲೈನ್ ಮುಖೇನ ಅಂತಿಮ ದಾಸ್ತಾನು ವಿವರವನ್ನು ಪಡೆಯಲು ಕ್ರಮವಹಿಸುವಂತೆ ಸಹಾಯಕ ನಿರ್ದೇಶಕರು (ಸಂವಿ) ರವರಿಗೆ ಆಯೋಗವು ಸೂಚಿಸಿತು.

**(ಕ್ರಮ: ಆಯುಕ್ತರು/ಜಂಟಿ ನಿರ್ದೇಶಕರು (ಸಂವಿ) ಆಹಾರ ಇಲಾಖೆ)**

**ಅಜೆಂಡಾ–7**

**ಸಮಾಜ ಕಲ್ಯಾಣ ಇಲಾಖೆ:–**

ಆಯೋಗವು ದಿನಾಂಕ:04.10.2018 ರಿಂದ 06.10.2018 ದಿನಾಂಕಗಳಂದು ದಾವಣಗೆರೆ ಜಿಲ್ಲೆಗೆ ಭೇಟಿ ನೀಡಿ ತಪಾಸಣೆ ನಡೆಸಲಾಗಿತ್ತು. ಈ ಹಾಸ್ಟೆಲ್‌ಗಳಲ್ಲಿ ಕಂಡುಬಂದ ನ್ಯೂನ್ಯತೆಗಳನ್ನು ಅದರಲ್ಲೂ ವಿಶೇಷವಾಗಿ ದಾವಣಗೆರೆ ನಗರದ ಪೋಸ್ಟ್ ಮೆಟ್ರಿಕ್ ಹುಡುಗಿಯರ ಹಾಸ್ಟೆಲ್‌ನಲ್ಲಿ ಗಂಭೀರವಾದ ಲೋಪದೋಷಗಳನ್ನು ಗಮನಿಸಲಾಗಿತ್ತು. ಈ ಬಗ್ಗೆ ದಿನಾಂಕ:06.10.2018 ರಂದು ದಾವಣಗೆರೆ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ನಡೆದ ಸಭೆಯಲ್ಲಿ ವಿವರಿಸಿ ಸಂಬಂಧಪಟ್ಟ ಹಾಸ್ಟೆಲ್‌ನಲ್ಲಿನ ವಾರ್ಡನ್‌ರ ವಿರುದ್ಧ ಶಿಸ್ತುಕ್ರಮ ಜರುಗಿಸಲು ಸೂಚಿಸಲಾಗಿತ್ತು. ಆದರೆ ಅಂತಹ ಯಾವುದೇ ಶಿಸ್ತುಕ್ರಮ ಕೈಗೊಳ್ಳದೆ

ಆಯೋಗವು ಸ್ಪಷ್ಟವಾಗಿ ನಡವಳಿಗಳಲ್ಲಿ ನಮೂದಿಸಲಾಗಿಯೂ ಸಹ ದಾವಣಗೆರೆಯ ಜಿಲ್ಲೆಯ ಉಪನಿರ್ದೇಶಕರಿಗೆ ಪತ್ರ ಬರೆದು "ಇನ್ನು ಮುಂದೆ ಇಂತಹ ಯಾವುದೇ ಪ್ರಕರಣಗಳು ಮರುಕಳಿಸದಂತೆ ಸೂಕ್ತ ಕ್ರಮ ವಹಿಸುವಂತೆ ಸೂಚಿಸಲಾಗಿದೆ" ಎಂದು ಅನುಸರಣಾ ವರದಿಯಲ್ಲಿ ತಿಳಿಸಿರುವುದು ಶೋಚನೀಯ ಸಂಗತಿ ಎಂದು ಆಯೋಗವು ವಿಷಾದ ವ್ಯಕ್ತಪಡಿಸಿತು. ಸ್ವಯತ್ತ ಅಧಿಕಾರ ಹೊಂದಿದ ಆಯೋಗದ ಸೂಚನೆಯನ್ನು ಸಮಾಜ ಕಲ್ಯಾಣ ಇಲಾಖೆಯು ಸರಿಯಾಗಿ ಗಮನಿಸುತ್ತಿಲ್ಲವೆಂದು ಆಯೋಗವು ಅಭಿಪ್ರಾಯಿಸಿತು. ಈಗಾಗಲೇ ನಾಲ್ಕೈದು ಜಿಲ್ಲೆಗಳ ವಿವಿಧ ಇಲಾಖೆಗಳ ಹಾಸ್ಟೆಲ್‌ಗಳಿಗೆ ಆಯೋಗವು ಭೇಟಿ ನೀಡಿ ವಿವರವಾಗಿ ಪರಿಶೀಲಿಸಿ ಕಂಡುಬಂದ ಲೋಪದೋಷಗಳನ್ನು ಆಯಾ ಜಿಲ್ಲಾಧಿಕಾರಿಗಳ ಕಛೇರಿಗಳಲ್ಲಿ ಸಂಬಂಧಿಸಿದ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಸೂಚನೆ ನೀಡಲಾಗಿರುತ್ತದೆ. ಆದರೆ ಇದುವರೆಗೂ ಸಂಬಂಧಿಸಿದ ಜಿಲ್ಲಾ ಮಟ್ಟದ ಅಧಿಕಾರಿಗಳಿಂದ ಯಾವುದೇ ಅನುಪಾಲನ ವರದಿ ಆಯೋಗಕ್ಕೆ ಸ್ವೀಕೃತವಾಗಿರುವುದಿಲ್ಲ. ಕಾರಣ, ಹಾಸ್ಟೆಲ್‌ಗಳ ಭೇಟಿ ಬಗ್ಗೆ ಕ್ರಮತೆಗೆದುಕೊಳ್ಳಲು ಆಯೋಗದ ಕಛೇರಿಯಿಂದ ಜಿಲ್ಲಾ ಮಟ್ಟದ ಸಭೆಗಳ ನಡವಳಿಗಳನ್ನು ಪಡೆದು ಸೂಕ್ತಕ್ರಮ ಕೈಗೊಳ್ಳುವಂತೆ ಹಾಜರಿದ್ದ ಸಮಾಜ ಕಲ್ಯಾಣ ಇಲಾಖೆ, ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಲಾಯಿತು.

**(ಕ್ರಮ:ಸಮಾಜ ಕಲ್ಯಾಣ ಇಲಾಖೆ ಹಾಗೂ ಸದಸ್ಯ ಕಾರ್ಯದರ್ಶಿ ಕರ್ನಾಟಕ ರಾಜ್ಯ ಆಹಾರ ಆಯೋಗ)**

ರಾಜ್ಯದ ವಿವಿಧ ಹಾಸ್ಟೆಲ್‌ಗಳಿಗೆ ಆಹಾರ ಇಲಾಖೆಯಿಂದ ರಿಯಾಯಿತಿ ದರದಲ್ಲಿ ನೀಡಲಾಗುತ್ತಿರುವ ಗೋಧಿಯ ಪ್ರಮಾಣವು ನಗಣ್ಯವಾಗಿದ್ದು ಇದರಿಂದಾಗಿ ಸದರಿ ಹಾಸ್ಟೆಲ್‌ಗಳಿಗೆ ಬೇಕಾಗುವ ಗೋಧಿಯನ್ನು ಮುಕ್ತ ಮಾರುಕಟ್ಟೆಯಿಂದ ಖರೀದಿಸಲಾಗುತ್ತಿದ್ದು, ಇದು ಹಾಸ್ಟೆಲ್‌ಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ ಎಂದು ಹಾಜರಿದ್ದ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು ಆಯೋಗದ ಗಮನಕ್ಕೆ ತಂದಿರುತ್ತಾರೆ. ಹಾಸ್ಟೆಲ್ ಸ್ಕೀಂನ ಅಡಿಯಲ್ಲಿ ಅಕ್ಟೋಬರ್ 2018 ರಿಂದ ಮಾರ್ಚ್ 2019ರವರೆಗೆ ಒಟ್ಟು 18,700.50 ಮೆಟ್ರಿಕ್‌ಟನ್ ಪಡಿತರ ಗೋಧಿಯನ್ನು ಬಿಡುಗಡೆಮಾಡುವಂತೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು ಒಟ್ಟು ಆರು ತಿಂಗಳಿಗೆ ಕೇವಲ 34.14 ಟನ್ ಪಡಿತರ ಗೋಧಿಯನ್ನು ಮಾತ್ರ ಬಿಡುಗಡೆ ಮಾಡಿರುತ್ತಾರೆ.

ಈ ಮೇಲಿನ ನ್ಯೂನ್ಯತೆಯನ್ನು ಹೋಗಲಾಡಿಸಲು ಅವಶ್ಯಕ ಪ್ರಮಾಣದ ಪಡಿತರ ಗೋಧಿಯನ್ನು ಬಿಡುಗಡೆ ಮಾಡುವಂತೆ ಒತ್ತಾಯಿಸಿ ರಾಜ್ಯ ಸರ್ಕಾರಕ್ಕೆ ಹಾಗೂ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಲು ಸೂಚಿಸಲಾಯಿತು.

**(ಕ್ರಮ: ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಆಹಾರ ಆಯೋಗ)**

**ಅಜೆಂಡಾ-8**

**<u>ಕಾನೂನು ಮಾಪನ ಶಾಸ್ತ್ರ ಇಲಾಖೆ:</u>**

ನ್ಯಾಯಬೆಲೆ ಅಂಗಡಿಗಳಲ್ಲಿ ಸ್ಟಾಂಪಿಂಗ್ ಮಾಡದೇ ಇರುವಂತಹ 200 ಪ್ರಕರಣಗಳನ್ನು ದಾಖಲಿಸಿರುವುದಾಗಿ ಹಿಂದಿನ ಸಭೆಯಲ್ಲಿ ತಿಳಿಸಿರುತ್ತೀರಿ, ಅಂತಹ ಪ್ರಕರಣಗಳ ಮಾಹಿತಿಯನ್ನು ಸಂಬಂಧಪಟ್ಟ ಉಪನಿರ್ದೇಶಕರು ಆಹಾರ ಇಲಾಖೆ ರವರಿಗೆ ನೀಡುವಂತೆ ಆಯೋಗವು ತಿಳಿಸಿತು. ಹಾಗೂ

ಪ್ರಕರಣದ ವಿರುದ್ದ ಉಪನಿರ್ದೇಶಕರುಗಳಿಂದ/ಜಂಟಿನಿರ್ದೇಶಕರುಗಳಿಂದ ಯಾವ ಕ್ರಮಕೈಗೊಳ್ಳಲಾಗುತ್ತಿದೆ ಎಂಬುದರ ಬಗ್ಗೆ ಗಮನವಹಿಸಲು ಆಯೋಗವು ಸೂಚಿಸಿತು.

**(ಕ್ರಮ: ಉಪ ನಿಯಂತ್ರಕರು, ತೂಕ ಮತ್ತು ಅಳತೆ ಕಾನೂನು ಮಾಪನ ಶಾಸ್ತ್ರ ಇಲಾಖೆ)**

ಆಯೋಗವು ಕಳೆದ ಒಂದು ವರ್ಷದಿಂದ ಅನೇಕ ಜಿಲ್ಲೆಗಳಿಗೆ ಭೇಟಿ ನೀಡಿ ಕಂಡು ಬಂದ ನ್ಯೂನತೆಗಳನ್ನು ಸರಿಪಡಿಸಿಕೊಳ್ಳುವಂತೆ ಹಾಗೂ ಕೆಲವು ಸುಧಾರಣೆಗಳನ್ನು ತರುವಂತೆ ಸಲಹೆಗಳನ್ನು ನೀಡಿ ನಡವಳಿಗಳನ್ನು ಹೊರಡಿಸುತ್ತಿರುತ್ತದೆ. ಸಂಬಂಧಪಟ್ಟ ಅಧಿಕಾರಿಗಳು ಸದರಿ ನಡಾವಳಿಗಳ ಪ್ರತಿಗಳನ್ನು ಪಡೆದು ಇಲಾಖೆಯ ಮುಖ್ಯಸ್ಥರ ಗಮನಕ್ಕೆ ತಂದು ರಾಜ್ಯ / ಜಿಲ್ಲಾ / ತಾಲ್ಲೂಕು ಹಂತಗಳಲ್ಲಿ ನಡೆಯುವ ಸಭೆಗಳಲ್ಲಿ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಿ ಆಯೋಗವು ನೀಡಿರುವ ಸಲಹೆ, ಸೂಚನೆಗಳನ್ನು ಕಾರ್ಯಗತಗೊಳಿಸಲು ತಿಳಿಸಲಾಯಿತು. ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಡಾ.ಎನ್.ಕೃಷ್ಣಮೂರ್ತಿ)
ಅಧ್ಯಕ್ಷರು
ಕರ್ನಾಟಕ ರಾಜ್ಯ ಆಹಾರ ಆಯೋಗ
ಬೆಂಗಳೂರು

ಸದಸ್ಯ ಕಾರ್ಯದರ್ಶಿ
ಕರ್ನಾಟಕ ರಾಜ್ಯ ಆಹಾರ ಆಯೋಗ
ಹಾಗೂ ಅಪರ ನಿರ್ದೇಶಕರು-2
ಆನಾಸ & ಗ್ರಾವ್ಯ ಇಲಾಖೆ, ಬೆಂಗಳೂರು.

ದಿನಾಂಕ:30.10.2018 ರಂದು ನಡೆದ ಕರ್ನಾಟಕ ರಾಜ್ಯ ಆಹಾರ ಆಯೋಗದ ಹದಿನಾರನೆಯ ಸಭೆಯ ನಡವಳಿಗಳು.

*****

ಉಪಸ್ಥಿತರು :

1) ಡಾ.ಎನ್.ಕೃಷ್ಣಮೂರ್ತಿ, ಅಧ್ಯಕ್ಷರು, ಕರ್ನಾಟಕ ರಾಜ್ಯ ಆಹಾರ ಆಯೋಗ, ಬೆಂಗಳೂರು.
2) ಶ್ರೀ ವಿ.ಬಿ.ಪಾಟೀಲ್, ಸದಸ್ಯರು, ಕರ್ನಾಟಕ ರಾಜ್ಯ ಆಹಾರ ಆಯೋಗ, ಬೆಂಗಳೂರು.
3) ಶ್ರೀ ಹೆಚ್.ವಿ.ಶಿವಶಂಕರ್, ಸದಸ್ಯರು, ಕರ್ನಾಟಕ ರಾಜ್ಯ ಆಹಾರ ಆಯೋಗ, ಬೆಂಗಳೂರು.
4) ಶ್ರೀ ಹಸಬಿ.ಡಿ.ಜಿ., ಸದಸ್ಯರು, ಕರ್ನಾಟಕ ರಾಜ್ಯ ಆಹಾರ ಆಯೋಗ, ಬೆಂಗಳೂರು.
5) ಶ್ರೀಮತಿ ಮಂಜುಳ ಬಾಯಿ, ಆರ್.ಸಾತ್‌ನೂರ್ ಸದಸ್ಯರು, ಕರ್ನಾಟಕ ರಾಜ್ಯ ಆಹಾರ ಆಯೋಗ, ಬೆಂಗಳೂರು.
6) ಶ್ರೀಮತಿ ಸುಜಾತ ಡಿ.ಹೊಸಮನಿ, ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಆಹಾರ ಆಯೋಗ ಅಪರ ನಿರ್ದೇಶಕರು-2/ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಬೆಂಗಳೂರು.
7) ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ (ಐ.ಸಿ.ಡಿ.ಎಸ್.ವಿಭಾಗ), ಬೆಂಗಳೂರು.
8) ಶ್ರೀ.ಚಂದ್ರಶೇಖರ್ ಉಪ ಪ್ರಧಾನ ವ್ಯವಸ್ಥಾಪಕರು ಕರ್ನಾಟಕ ಆಹಾರ ನಾಗರಿಕ ಸರಬರಾಜು ನಿಗಮ ನಿಯಮಿತ, ಬೆಂಗಳೂರು.
9) ಸಹಾಯಕ ನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ಮಧ್ಯಾಹ್ನ ಉಪಾಹಾರ ಯೋಜನೆ.
10) ಜಂಟಿ ನಿರ್ದೇಶಕರು (ಶಿಕ್ಷಣ) ಸಮಾಜ ಕಲ್ಯಾಣ ಇಲಾಖೆ ಬೆಂಗಳೂರು.
11) ಉಪ ನಿಯಂತ್ರಕರು (ಆಡಳಿತ) ಕಾನೂನು ಮಾಪನ ಶಾಸ್ತ್ರ ಇಲಾಖೆ ಬೆಂಗಳೂರು.
12) ಸಹಾಯಕ ನಿರ್ದೇಶಕರು, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಬೆಂಗಳೂರು.

***

ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಆಹಾರ ಆಯೋಗರವರು ಸಭೆಯಲ್ಲಿ ಹಾಜರಿದ್ದ ಅಧ್ಯಕ್ಷರು, ಸದಸ್ಯರು ಹಾಗೂ ಎಲ್ಲಾ ಅಧಿಕಾರಿಗಳಿಗೆ ಸ್ವಾಗತವನ್ನು ಕೋರಿ ಸಭೆಯ ಅಧ್ಯಕ್ಷತೆ ವಹಿಸಲು ಮಾನ್ಯ ಅಧ್ಯಕ್ಷರನ್ನು ವಿನಂತಿಸಿದರು.

**ಅಜೆಂಡಾ – 1 :**

ದಿನಾಂಕ: 30.10.2018 ರಂದು ನಡೆದ ಸಭೆಯ ನಡವಳಿಯನ್ನು ಓದಿ ದೃಢೀಕರಿಸಲಾಯಿತು.

ಅಜೆಂಡಾ-2

ಹಿಂದಿನ ಸಭೆಯಲ್ಲಿ ತೀರ್ಮಾನಿಸಿದ ವಿಷಯಗಳ ಬಗ್ಗೆ ತೆಗೆದುಕೊಂಡ ಕ್ರಮಗಳನ್ನು/ಅನುಪಾಲನಾ ವರದಿಗಳನ್ನು ಪರಿಶೀಲಿಸಲಾಯಿತು.

ಅಜೆಂಡಾ-3 : ಕೆ.ಎಫ್.ಸಿ.ಎಸ್.ಸಿ

ಕಳೆದ ಹಲವಾರು ಸಭೆಗಳಲ್ಲಿ ಚರ್ಚಿಸಿ ಸೂಚಿಸುತ್ತಿರುವಂತೆ ಕೆ.ಎಫ್.ಸಿ.ಎಸ್.ಸಿ ಆಹಾರ ಗೋದಾಮುಗಳಲ್ಲಿ ದಾಸ್ತಾನನ್ನು ವೈಜ್ಞಾನಿಕವಾಗಿ ಜೋಡಣೆ ಆಗದ ಬಗ್ಗೆ ಆಯೋಗವು ತೀವ್ರವಾಗಿ ಖಂಡಿಸಿತು. ಹಾಗೂ ಸಗಟು ಮಳಿಗೆಗಳಲ್ಲಿ ಆಹಾರ ದಾಸ್ತಾನನ್ನು ವೈಜ್ಞಾನಿಕವಾಗಿ ಜೋಡಣೆಗೊಳಿಸಿ ವರದಿ ನೀಡುವಂತೆ ಹಾಗೂ ಮುಂದಿನ ಮಾಹೆಯ ಸಭೆಗಳಲ್ಲಿ ಇದರ ಬಗ್ಗೆ ಚರ್ಚೆಗೆ ಅವಕಾಶವೀಯದಂತೆ ಕ್ರಮವಹಿಸಲು ತಿಳಿಸಲಾಗಿದ್ದರೂ ಇನ್ನು ಸುಧಾರಣೆ ಆಗಿರುವುದಿಲ್ಲ, ಯಶವಂತಪುರ ಆಹಾರ ಗೋದಾಮಿನಲ್ಲಿ ದಾಸ್ತಾನು ಶೇಖರಣೆಯನ್ನು ವೈಜ್ಞಾನಿಕವಾಗಿ, ಜೋಡಣೆ ಮಾಡಲು ವುಡನ್ ಕ್ರೇಟ್ಸ್ ಉಪಯೋಗಿಸುವುದರ ಬಗ್ಗೆ ಸುಮಾರು 6 ತಿಂಗಳಿಂದಲೂ ಹೇಳುತ್ತಾ ಬಂದಾಗ್ಯೂ ಇನ್ನು ಸುಧಾರಣೆ ಮಾಡಿಲ್ಲ ಹೀಗಿರುವಾಗ ಜಿಲ್ಲೆಗಳಲ್ಲಿ ಹೇಗೆ ಸುಧಾರಣೆ ಮಾಡುತ್ತೀರಿ? ಎಂದು ಆಯೋಗ ಪ್ರಶ್ನಿಸಿತು. ಕೇವಲ ಸಭೆಯಲ್ಲಿ ಮಾತಿನ ಮೂಲಕ ಸುಧಾರಣೆ ವಿಚಾರ ವಿನಿಮಯ ಆಗಿರುತ್ತದೆಯಷ್ಟೇ ಅದರ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಿರುವುದಿಲ್ಲವೆಂದು ಆಯೋಗವು ಆಕ್ಷೇಪಿಸಿತು. ಯಶವಂತಪುರ ಗೋದಾಮಿನಲ್ಲಿರುವ ವುಡನ್ ಕ್ರೇಟ್ಸ್‌ನ್ನು ಬೆಂಗಳೂರಿನ ಸುತ್ತಮುತ್ತಲಿನ ಗೋದಾಮುಗಳಲ್ಲಿ ಬಳಸಬೇಕಾಗಿ ಆಯೋಗವು ಸಲಹೆ ನೀಡಿತು. ಒಂದು ವರ್ಷದ ಹಿಂದೆ ಇದ್ದ ಪರಿಸ್ಥಿಯೇ ಈಗಲೂ ಮುಂದುವರೆಯುತ್ತಿರುವ ಬಗ್ಗೆ ಹಾಗೂ ಪ್ರಧಾನ ವ್ಯವಸ್ಥಾಪಕರು ಸಭೆಗೆ ಹಾಜರಾದ ಬಗ್ಗೆ ಆಯೋಗವು ಅಸಮಾಧಾನ ವ್ಯಕ್ತಪಡಿಸಿ, ಇನ್ನು ಮುಂದಿನ ಸಭೆಗಳಿಗೆ ವ್ಯವಸ್ಥಾಪಕ ನಿರ್ದೇಶಕರು ಅಥವಾ ಪ್ರಧಾನ ವ್ಯವಸ್ಥಾಪಕರಾದರೂ ಹಾಜರಾಗುವಂತೆ ಸೂಚಿಸಿ, ಕೆ.ಎಫ್.ಸಿ.ಎಸ್.ಸಿಯಿಂದ ಆಯೋಗಕ್ಕೆ ಸಲ್ಲಿಸುವ ವರದಿಗಳು ಖುದ್ದು ಪ್ರಧಾನ ವ್ಯವಸ್ಥಾಪಕರಿಂದ ಅನುಮೋದನೆ ಪಡೆದು ಸಲ್ಲಿಸುವಂತೆ ಸೂಚಿಸಿತು.

ಕೆ.ಎಫ್.ಸಿ.ಎಸ್.ಸಿ ಆಹಾರ ಗೋದಾಮುಗಳಲ್ಲಿ ವಿಲೇವಾರಿ ಆಗದೇ ಹಾಗೇ ಉಳಿದಿರುವ ಹಳೇ ದಾಸ್ತಾನಿನ ಬಗ್ಗೆ ಚರ್ಚಿಸಲಾಯಿತು. ಹಳೆಯದು, ಹಾಗೂ ಹೊಸ ದಾಸ್ತಾನೆಂದು ಬೇರೆಯಾಗಿ ವಿಂಗಡಿಸಿಲ್ಲವೆಂದು, ಇದರಿಂದ ಎಲ್ಲಾ ದಾಸ್ತಾನು ಹಾಳಾಗುವ ಸಂಭವ ಜಾಸ್ತಿಯಾಗಿದ್ದು, ಈ ವಿಚಾರದ ಬಗ್ಗೆ ಪ್ರತಿ ಸಭೆಯಲ್ಲೂ ಹೇಳುತ್ತಾ ಬಂದಿದ್ದರೂ ಸಹ ಯಾವುದೇ ಪ್ರಯೋಜನವಾಗಿರುವುದಿಲ್ಲ ಮತ್ತು ದಾಸ್ತಾನು ನಷ್ಟದ ಬಗ್ಗೆ ಹಿಂದಿನ ಸಭೆಯಲ್ಲಿ ಆಯೋಗವು ವಿಚಾರಿಸಿದ್ದರೂ ಸಹ ಕೆ.ಎಫ್.ಸಿ.ಎಸ್.ಸಿ ರವರು ಅನುಪಾಲನ ವರದಿಯಲ್ಲಿ ಆಯೋಗಕ್ಕೆ ಲೆಕ್ಕಾಚಾರದ ಬಗ್ಗೆ ಸರಿಯಾದ ಮಾಹಿತಿಯನ್ನು ನೀಡದೇ ಇರುವುದನ್ನು ಆಯೋಗವು ವಿಷಾದ ವ್ಯಕ್ತಪಡಿಸಿತು. ನಷ್ಟವಾದ ದಾಸ್ತಾನಿನ ವೆಚ್ಚದ ಬಗ್ಗೆ ಆಯೋಗವು ಸಭೆಯಲ್ಲಿ ಪ್ರಶ್ನಿಸಲಾಗಿ ಅಂದಾಜು ರೂ.3,82,32,887/- ಎಂದು ವಿವರಿಸಿದರು. ಇದರಿಂದ ಆಯೋಗವು ರಚನೆಯಾಗಿ ಕಾರ್ಯಕ್ಕೆಗೊಂಡ ಅವಧಿಯಲ್ಲಿ ಸುಮಾರು 17.00 ಕೋಟಿಯಷ್ಟು ನಷ್ಟವಾಗುವ ಸಂಭವ ಇದ್ದು ಈಗ ನಷ್ಟವು ಇಳಿಮುಖವಾಗಿರುವ ಬಗ್ಗೆ ಆಯೋಗವು ಕಾರಣವಾಗಿದೆ ಎಂದು 000ಸಂತಸ ವ್ಯಕ್ತಪಡಿಸಿತು.

ಆಹಾರ ಗೋದಾಮುಗಳಲ್ಲಿ ಉಳಿದಿರುವ ಸುಮಾರು 15 ಸಾವಿರ ಕ್ವಿಂಟಾಲ್ ರಾಗಿ ಅಂತಿಮ ದಾಸ್ತಾನು ಪ್ರಮಾಣದ ಬಗ್ಗೆ ಆಹಾರ ಇಲಾಖೆಯು ಏನು ಕ್ರಮಕೈಗೊಂಡಿದೆ ಎಂದು ಸಭೆಗೆ ಹಾಜರಿದ್ದ ಸಹಾಯಕ ನಿರ್ದೇಶಕರು (ಸಂವಿ)ರನ್ನು ವಿಚಾರಿಸಲಾಯಿತು. ಆದರೆ ಈ ಕುರಿತು ಸ್ಪಷ್ಟ ಮಾಹಿತಿ ತಿಳಿಸಿರುವುದಿಲ್ಲ. ಈ ಬಗ್ಗೆ ಜಿಲ್ಲೆಗಳಿಗೆ ಪತ್ರ ಬರೆದು ಮಾಹಿತಿ ಪಡೆಯುವಂತೆ ತಿಳಿಸಿತು ಹಾಗೂ ಆಯೋಗದ ಸಭೆಗೆ ಇಲಾಖೆಯ ವಿಚಾರಗಳನ್ನು ತಿಳಿದಿರುವ ಅಧಿಕಾರಿಯನ್ನು ಕಳುಹಿಸುವಂತೆ ಆಯುಕ್ತರಿಗೆ ತಿಳಿಸಲು ಸದಸ್ಯ ಕಾರ್ಯದರ್ಶಿಯವರಿಗೆ ಸೂಚಿಸಲಾಯಿತು. ಕೆ.ಎಫ್.ಸಿ.ಎಸ್.ಸಿ ಅಧಿಕಾರಿಗಳು 15,000 ಕ್ವಿಂಟಾಲ್ ರೂಗಳಷ್ಟು ಉಳಿದಿರುವ ರಾಗಿ ಹಂಚಿಕೆಗೆ ಆಹಾರ ಇಲಾಖೆಯಿಂದ ಆದೇಶ ನಿರೀಕ್ಷಿಸುತ್ತಿರುವುದಾಗಿ ತಿಳಿಸಿದರು.

4-5 ತಿಂಗಳುಗಳಿಂದ ಹಳೆ ದಾಸ್ತಾನು ಹಾಗೇ ಉಳಿದಿರುವುದರಿಂದ ಈ ಬಗ್ಗೆ ಕ್ರಮವಹಿಸದಿದ್ದರೆ ಮತ್ತು ದಾಸ್ತಾನು ಪೂರ್ಣವಾಗಿ ಹಾಳಾಗುವ ಸಂಭವವಿರುವುದರಿಂದ ಇದರ ವಿಲೇವಾರಿ ಬಗ್ಗೆ ತೀರ್ಮಾನ ಕೈಗೊಂಡು ಸಾರ್ವಜನಿಕ ವಿತರಣಾ ಪದ್ಧತಿಯಡಿ ವಿತರಣೆಗೆ ಕ್ರಮವಹಿಸಬೇಕೆಂದು ಆಯೋಗವು ಸೂಚಿಸಿತು.

(ಕ್ರಮ: ಪ್ರಧಾನ ವ್ಯವಸ್ಥಾಪಕರು ಕೆ.ಎಫ್.ಸಿ.ಎಸ್.ಸಿ)

ಅಜೆಂಡಾ: 4

ಮಧ್ಯಾಹ್ನ ಉಪಹಾರ ಯೋಜನೆಯ ಪರಿಣಾಮಕಾರಿ ಅನುಷ್ಠಾನದ ಬಗ್ಗೆ:

ಅಕ್ಷಯಪಾತ್ರೆಯ ಯೋಜನೆಯ ಬಗ್ಗೆ ಚರ್ಚೆ ನಡೆಸಲಾಯಿತು. ಮಕ್ಕಳಿಗೆ ನೀಡಲಾಗುವ ಆಹಾರ ಪೌಷ್ಠಕತೆಯ ಬಗ್ಗೆ ಯಾವ ಕ್ರಮ ವಹಿಸಿರುವುದಾಗಿ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳನ್ನು ಪ್ರಶ್ನಿಸಲಾಗಿ ಆಹಾರ ಪೌಷ್ಠಿಕಾಂಶದ ಬಗ್ಗೆ ಪ್ರಯೋಗಾಲಯಕ್ಕೆ ನೀಡಲಾಗಿರುತ್ತದೆ. ಆದರೆ ದಸರಾ ಹಬ್ಬದ ಪ್ರಯುಕ್ತ ಸತತವಾಗಿ ರಜೆ ಇದ್ದ ಕಾರಣ ಆಹಾರ ಪೌಷ್ಠಿಕಾಂಶದ ಬಗ್ಗೆ ಇನ್ನು ವರದಿ ಪಡೆಯಲಾಗಿಲ್ಲ ಎಂದು ಹಾಜರಿದ್ದ ಅಧಿಕಾರಿಗಳು ತಿಳಿಸಿದರು.

ಆಹಾರದಲ್ಲಿ ಈರುಳ್ಳಿ ಮತ್ತು ಬೆಳ್ಳುಳ್ಳಿ ಉಪಯೋಗಿಸುವ ಬಗ್ಗೆ ಹಿಂದಿನ ಸಭೆಯಲ್ಲಿ ಚರ್ಚಿಸಿದಂತೆ ಈ ಸಭೆಯಲ್ಲಿ ಸಹ ಚರ್ಚೆ ನಡೆಸಲಾಯಿತು. ಈರುಳ್ಳಿ ಮತ್ತು ಬೆಳ್ಳುಳ್ಳಿ ಉಪಯೋಗಿಸುವ ಬದಲಿಗೆ ಪೌಷ್ಠಿಕಾಂಶವಿರುವ ತರಕಾರಿಗಳನ್ನು ಅಡುಗೆ ತಯಾರಿಯಲ್ಲಿ ಉಪಯೋಗಿಸಲಾಗುತ್ತಿದೆಯೆಂದು ಸಭೆಯಲ್ಲಿ ಹಾಜರಿದ್ದವರು ಆಯೋಗಕ್ಕೆ ತಿಳಿಸಿದರು.

ಮಧ್ಯಾಹ್ನ ಉಪಾಹಾರ ಯೋಜನೆಯಡಿ ಮಕ್ಕಳಿಗೆ ತಯಾರಿಸಲಾಗುವ ಅಡುಗೆ ಸಾಮಗ್ರಿಗಳು ಒಳ್ಳೆಯ ಗುಣಮಟ್ಟದಾಗಿರುವುದಿಲ್ಲ ಇದರ ಪರಿಶೀಲನೆ ಬಗ್ಗೆ ಜಿಲ್ಲೆಗಳಿಗೆ ಭೇಟಿ ನೀಡಿದಾಗ ಆಯೋಗವು ಸಂಬಂಧಪಟ್ಟವರನ್ನು ವಿಚಾರಿಸಲಾಗಿ ಆಹಾರ ಸುರಕ್ಷತೆ ಬಗ್ಗೆ ಸಹಾಯಕ ನಿರ್ದೇಶಕರಿಗೆ (ಎಂಡಿಎಂ ಯೋಜನೆ) ಯಾವುದೇ ಅಧಿಕಾರ ಕೊಟ್ಟಿಲ್ಲವೆಂದು ತಿಳಿದುಬಂದಿರುತ್ತದೆ.

ಮಧ್ಯಾಹ್ನ ಉಪಾಹಾರ ಯೋಜನೆಯಡಿ ಶಾಲಾ ಮಕ್ಕಳಿಗೆ ನೀಡಲಾಗುವ ಆಹಾರದ ಪೌಷ್ಠಿಕಾಂಶದ ಬಗ್ಗೆ ಫುಡ್ ಸ್ಯಾಂಪಲ್ ಪ್ರಯೋಗಾಲಯಕ್ಕೆ ಕಳುಹಿಸಿ ನಾಲ್ಕು ಗಂಟೆಯೊಳಗಾಗಿ ವರದಿ ಪಡೆಯಬೇಕಿದೆ,

ಆದರೆ ಯಾರೂ ಸ್ಯಾಂಪಲ್ ಡ್ರಾ ಮಾಡಿ ಪರಿಶೀಲನೆಗೆ ಕಳುಹಿಸುತ್ತಿಲ್ಲ. ಜಿಲ್ಲೆಗಳಿಗೆ ಭೇಟಿ ನೀಡಿದಾಗ ಈ ಅಂಶವು ಬೆಳಕಿಗೆ ಬಂದಿರುತ್ತದೆ ಎಂದು ಆಯೋಗವು ತಿಳಿಸಿತು.

ಆಹಾರ ಸುರಕ್ಷತೆ ಬಗ್ಗೆ ಜಾಗೃತರಾಗಲು ಒಂದು ಜಿಲ್ಲೆಯಲ್ಲಿ ಒಂದು ತಿಂಗಳಿಗೊಮ್ಮೆಯಾದರೂ ರ್‍ಯಾಂಡಮ್ ಆಗಿ ಫುಡ್ ಸ್ಯಾಂಪಲ್ ಬಗ್ಗೆ ಕಡ್ಡಾಯವಾಗಿ ಕ್ರಮತೆಗೆದುಕೊಳ್ಳಬೇಕು ಆದರೆ ಇದು ನಡೆಯುತ್ತಿಲ್ಲ. ಆದ್ದರಿಂದ ಈ ಕುರಿತು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಗೆ ಪತ್ರ ಬರೆಯಲು ಆಯೋಗವು ತಿಳಿಸಿತು.

ಮಧ್ಯಾಹ್ನ ಉಪಾಹಾರ ಯೋಜನೆಯಡಿ ಬೆಂಗಳೂರಿನಲ್ಲಿ ಇಸ್ಕಾನ್ ಸಂಸ್ಥೆಯವರು ಶಾಲಾ ಮಕ್ಕಳಿಗೆ ಕುಡಿಯಲು ತಣ್ಣನೆ ಹಾಲನ್ನು ನೀಡುತ್ತಿರುವುದರಿಂದ ಮಕ್ಕಳು ಕುಡಿಯುತ್ತಿಲ್ಲವೆಂದು, ಅದಕ್ಕೆ ಬದಲಾಗಿ ಕಾಯಿಸಿ ಆರಿಸಿದ ಹಾಲನ್ನು ನೀಡುವ ಬಗ್ಗೆ ವಿಚಾರವನ್ನು ತಿಳಿಸುವಂತೆ ಸಭೆಗೆ ಹಾಜರಿದ್ದ ಮಧ್ಯಾಹ್ನ ಉಪಹಾರ ಯೋಜನೆ ಅಧಿಕಾರಿಯು ಆಯೋಗಕ್ಕೆ ಮನವಿ ಮಾಡಿದರು.

ಮಧ್ಯಾಹ್ನ ಉಪಾಹಾರ ಯೋಜನೆಯಡಿ ನೀಡಲಾಗುತ್ತಿರುವ (1 1/4) ಬಾಕ್ಸ್ ಆಹಾರದ ಬಗ್ಗೆ ಚರ್ಚೆಯಾಯಿತು. ಚರ್ಚೆಯಲ್ಲಿ ಆಹಾರದ ಪ್ರಮಾಣದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಆದರೆ ವಿತರಿಸಲಾಗುತ್ತಿರುವ ಹಣ ಪಾವತಿಯಲ್ಲಿ ಬದಲಾವಣೆ ಆಗುತ್ತಿದೆಯೇ ಎಂದು ವಿಚಾರಿಸಿತು.

ಎಲ್ಲಾ ಮಕ್ಕಳು ಮಧ್ಯಾಹ್ನ ಉಪಾಹಾರ ಯೋಜನೆಯಡಿ ವಿತರಿಸುವ ಆಹಾರವನ್ನು ಸೇವಿಸುವುದಿಲ್ಲ. ಕೆಲವು ಮಕ್ಕಳು ಮನೆಯಿಂದಲೇ ಉಪಹಾರವನ್ನು ತಂದು ತಿನ್ನುತ್ತಾರೆ. ಆದ್ದರಿಂದ ಹಣ ಪಾವತಿಯಲ್ಲಿ ವ್ಯತ್ಯಾಸವಾಗುವುದಾಗಿ ಸಭೆಗೆ ತಿಳಿಸಿದರು. ಅದಕ್ಕೆ ಆಯೋಗವು ಮಧ್ಯಾಹ್ನ ಉಪಹಾರ ಯೋಜನೆಗೆ ಪಡಿತರವನ್ನು ಕೆ.ಎಫ್.ಸಿ.ಎಸ್.ಸಿ ನಿಂದ ವಿತರಣೆ ಆಗುವುದರಿಂದ, ಎಷ್ಟು ಮಕ್ಕಳಿಗೆ ಮಧ್ಯಾಹ್ನ ಉಪಾಹಾರ ಅವಶ್ಯಕತೆಯಿದೆಯೋ ಅಷ್ಟು ಮಕ್ಕಳಿಗೆ ಮಾತ್ರ ಹಂಚಿಕೆ ಪಡೆಯಿರಿ ಎಂದು ಆಯೋಗವು ಸಲಹೆ ನೀಡಿತು.

ಬೆಂಗಳೂರು ವಸಂತ ನಗರ ಪ್ರದೇಶದಲ್ಲಿರುವ ಶಾಲೆಯ ಸ್ಥಿತಿಯ ಬಗ್ಗೆ ಪತ್ರಿಕೆಯಲ್ಲಿ ಪ್ರಕಟಣೆಯಾದ ಅಂಶದ ಬಗ್ಗೆ ಆಯೋಗದ ಸದಸ್ಯರು ಚರ್ಚಿಸಿ, ಸದರಿ ಶಾಲೆಯಲ್ಲಿ ಒಟ್ಟು 192 ಮಕ್ಕಳಿರುವುದಾಗಿ ಮಕ್ಕಳಿಗೆ ಶಾಲಾ ಕಟ್ಟಡವಿಲ್ಲದೆ ಕಲ್ಯಾಣ ಮಂಟಪ ಕಟ್ಟಡವೊಂದರಲ್ಲಿ ಶಾಲೆ ನಡೆಸುತ್ತಿರುವುದಾಗಿಯೂ ಶಾಲೆಯ ಶಿಕ್ಷಕರಿಗೆ ವೇತ್ತನ ಹೊರತುಪಡಿಸಿ, ಮಕ್ಕಳಿಗೆ ಇತರೆ ಯಾವುದೇ ಸೌಲಭ್ಯಕ್ಕೆ ಅನುದಾನ ಬಿಡುಗಡೆಯಾಗುತ್ತಿಲ್ಲವೆಂದು ಪತ್ರಿಕೆಯಲ್ಲಿ ಪ್ರಕಟವಾಗಿರುವ ವಿಷಯದ ಬಗ್ಗೆ ಸೂಕ್ತ ಕ್ರಮವಹಿಸುವಂತೆ ಸಭೆಗೆ ಹಾಜರಿದ್ದ ಮಧ್ಯಾಹ್ನ ಉಪಾಹಾರ ಯೋಜನೆಯ ಅಧಿಕಾರಿಗಳಿಗೆ ಆಯೋಗವು ತಿಳಿಸಿದರು.

**(ಕ್ರಮ:ಜಂಟಿ ನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ (ಮಧ್ಯಾಹ್ನ ಉಪಾಹಾರ ಯೋಜನೆ)**

**ಅಜೆಂಡಾ–5**

**ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆ(ಐ.ಸಿ.ಡಿ.ಎಸ್):**

ಹಿಂದಿನ ಸಭೆಯಲ್ಲಿ ಚರ್ಚಿಸಿದಂತೆ ಈ ಸಭೆಯಲ್ಲಿಯೂ ಜಿಲ್ಲೆಯ ಅಂಗನವಾಡಿ ಶಾಲೆಗಳಲ್ಲಿ ಹಾಜರಾತಿ ಪುಸ್ತಕ ನಿರ್ವಹಣೆಯ ಬಗ್ಗೆ ಸುಧಾರಿಸಿಲ್ಲವೆಂದು ಈ ಬಗ್ಗೆ ಸುತ್ತೋಲೆಯೊಂದನ್ನು ಹೊರಡಿಸಿ

ಸುತ್ತೋಲೆಯಲ್ಲಿ ಹಾಜರಾತಿಯ ಬಗ್ಗೆ ಕ್ರಮವಾಗಿ ಹಾಜರಾತಿ ಪುಸ್ತಕ ನಿರ್ವಹಣೆ ಮಾಡದಿದ್ದಲ್ಲಿ ಅಂತವರ ವಿರುದ್ಧ ಶಿಸ್ತುಕ್ರಮ ಜರುಗಿಸುವುದಾಗಿ ಆಯೋಗವು ತಿಳಿಸಿತು.

(ಕ್ರಮ: ನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ)

ಅಜೆಂಡಾ–6

ಅನ್ನ ಭಾಗ್ಯ ಯೋಜನೆ:

ಆಹಾರ ಇಲಾಖೆಯಿಂದ ಆಹಾರ ಗೋದಾಮುಗಳಿಗೆ ನೀಡಲಾಗುವ ಆಹಾರ ಧಾನ್ಯ ಹಂಚಿಕೆಗೆ ಪ್ರತಿ ಮಾಹೆ ಪಡೆಯಲಾಗುವ ಅಂತಿಮ ದಾಸ್ತಾನಿನ ಬಗ್ಗೆ ಚರ್ಚೆಯಾಯಿತು.
ನ್ಯಾಯಬೆಲೆ ಅಂಗಡಿಗಳಲ್ಲಿ ಕಾರ್ಡುದಾರರಿಗೆ ಮಾಹೆಯ ಅಂತ್ಯದವರೆಗೂ ಪಡಿತರ ವಿತರಣೆಗೆ ಅವಕಾಶವಿರುತ್ತದೆ. ಆದರೆ ಮುಂದಿನ ತಿಂಗಳ ಹಂಚಿಕೆಯನ್ನು ದಿನಾಂಕ:23,24 ರಂದೇ ಮಾಡಲಾಗುವುದರಿಂದ ಸಗಟು ಮಳಿಗೆಗಳಲ್ಲಿ ಉಳಿದಿರುವ ಅಂತಿಮ ದಾಸ್ತಾನೆಷ್ಟು? ಎಂಬ ಬಗ್ಗೆ ಖಚಿತ ಮಾಹಿತಿ ಇರುವುದಿಲ್ಲ. ಆದ್ದರಿಂದ ತಿಂಗಳ ಕೊನೆಗೆ ಸಗಟು ಮಳಿಗೆಗಳಲ್ಲಿ/ನ್ಯಾಯಬೆಲೆ ಅಂಗಡಿಗಳಲ್ಲಿ ಉಳಿಯುವ ಅಂತಿಮ ದಾಸ್ತಾನಿನ ಬಗ್ಗೆ ಪ್ರತ್ಯೇಕವಾಗಿ ಮಾಹಿತಿ ತೆಗೆದುಕೊಳ್ಳಬೇಕಾಗುತ್ತದೆ. ಮಾಹಿತಿಯು ಸ್ಪಷ್ಟವಾಗಿರುವುದಿಲ್ಲವೆಂದು ಅಭಿಪ್ರಾಯ ವ್ಯಕ್ತಪಡಿಸಿ, ಆಯುಕ್ತರ ಅನುಪಾಲನಾ ವರದಿಯನ್ನು ಒಪ್ಪಿರುವುದಿಲ್ಲವೆಂದು ಆಯೋಗವು ತಿಳಿಸಿತು.

(ಕ್ರಮ: ಜಂಟಿ ನಿರ್ದೇಶಕರು (ಸಂವಿ) ಶಾಖೆ)

ಅಜೆಂಡಾ–7

ಸಮಾಜ ಕಲ್ಯಾಣ ಇಲಾಖೆ:–

ಸಮಾಜ ಕಲ್ಯಾಣ ಇಲಾಖೆಯಿಂದ ನಡೆಸಲಾಗುತ್ತಿರುವ ಎಸ್.ಸಿ/ಎಸ್.ಟಿ ಬಿಸಿಎಂ ಹಾಸ್ಟೆಲ್‌ಗಳಿಗೆ ಆಹಾರ ಇಲಾಖೆಯಿಂದ ನೀಡಲಾಗುತ್ತಿರುವ ಪಡಿತರ ಹಂಚಿಕೆ ಬಗ್ಗೆ ಸಭೆಯಲ್ಲಿ ವಿವರಣೆಯನ್ನು ಕೇಳಲಾಯಿತು. ಇದುವರೆಗೂ ಆಹಾರ ಇಲಾಖೆಯಿಂದ ಹಂಚಿಕೆಯನ್ನು ಒಟ್ಟಿಗೆ 6 ತಿಂಗಳಿಗೊಮ್ಮೆ ನೀಡಲಾಗುತ್ತಿತ್ತು. ಇತ್ತೀಚೆಗೆ ಪ್ರತಿ ತಿಂಗಳು ಬೇಡಿಕೆ ಪಟ್ಟಿ (Requirement)ಯನ್ನು ಇಲಾಖೆಯಿಂದ ಕಳುಹಿಸಲಾಗುತ್ತಿದೆ ಅದಕ್ಕನುಗುಣವಾಗಿ ಹಂಚಿಕೆ ಬರಬೇಕಿದೆ ಆದರೆ ಹಂಚಿಕೆಯಲ್ಲಿ ವ್ಯತ್ಯಾಸವಾಗುತ್ತಿದೆಯೆಂದು ಸಭೆಯಲ್ಲಿ ಹಾಜರಿದ್ದ ಸಮಾಜ ಕಲ್ಯಾಣ ಇಲಾಖೆಯ ಜಂಟಿನಿರ್ದೇಶಕರು ತಿಳಿಸಿದರು.

ಆಯೋಗವು ದಾವಣಗೆರೆ ಜಿಲ್ಲೆಗೆ ಭೇಟಿ ನೀಡಿದಾಗ ಆಹಾರ ಇಲಾಖೆಯವರು ಹಾಸ್ಟೆಲ್ ಗಳಿಗೆ ಗೋಧಿ ಹಂಚಿಕೆ ನೀಡುತ್ತಿಲ್ಲ ಆದ್ದರಿಂದ ಮಕ್ಕಳಿಗೆ ಚಪಾತಿಯನ್ನು ಹೊರಗಡೆಯಿಂದ ಕೊಳ್ಳಲಾಗುತ್ತಿದ್ದು, ಚಪಾತಿಯು ಅತ್ಯಂತ ತೆಳ್ಳಗಿದ್ದು, ಮಕ್ಕಳಿಗೆ ಹೊಟ್ಟೆ ತುಂಬುವುದಿಲ್ಲವೆಂದೂ, ಮಕ್ಕಳು ಹಸಿವಿನಿಂದ ಬಳಲುತ್ತಿರುವುದಾಗಿ ತಿಳಿಸಿದರು. ಅಲ್ಲದೇ ಹೆಚ್ಚಿನ ದರ ನೀಡಿ ಚಪಾತಿಯನ್ನು ಖರೀದಿಸಿ ನೀಡುತ್ತಿರುವುದಾಗಿ ಆಯೋಗದ ಸದಸ್ಯರು ತಿಳಿಸಿದರು. ಇದು ಮುಂದುವರೆಯಬಾರದು, ಎಸ್.ಸಿ/ಎಸ್.ಟಿ/ ಬಿಸಿಎಂ

ಹಾಸ್ಟೆಲ್‌ಗಳ ಮಕ್ಕಳು ಕೂಡ ರಾಜ್ಯದ ಮಕ್ಕಳೇ ಆಗಿರುವುದರಿಂದ ಯಾವುದೇ ಭೇದ-ಭಾವವಿಲ್ಲದೇ ಅಂಗನವಾಡಿ ಶಾಲೆಯ ಮಕ್ಕಳಿಗೆ ನೀಡುವಂತೆಯೇ ಸಮಾಜ ಕಲ್ಯಾಣ ಇಲಾಖೆಯ ಹಾಸ್ಟೆಲ್‌ಗಳಿಗೂ ಗೋಧಿ ಹಂಚಿಕೆ ನೀಡಬೇಕಿದೆ. ಮಕ್ಕಳಿಗೆ ಪಡಿತರ ವ್ಯವಸ್ಥೆಯಲ್ಲಿ ಅವಕಾಶ ಕಲ್ಪಿಸಬೇಕೆಂದು ಆಯೋಗ ಅಭಿಪ್ರಾಯ ನೀಡಿತು. ಹಾಗೂ ಆಹಾರ ಇಲಾಖೆಯಿಂದ ನೀಡಲಾಗುವ ಹಂಚಿಕೆಯಂತೆ ಕ್ರಮವಾಗಿ ಎತ್ತುವಳಿ ಮಾಡಬೇಕು. ಅಗತ್ಯವಿರುವಷ್ಟು ದಾಸ್ತಾನು ಮಾತ್ರ ಹಂಚಿಕೆ ಕೇಳಿ, ಅನಗತ್ಯವಾಗಿ ದಾಸ್ತಾನು ಹಾಳು ಮಾಡಬೇಡಿ ಎಂದು ಆಯೋಗವು ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳಿಗೆ ಸಲಹೆ ನೀಡಿತು. ಮತ್ತು ಪಡಿತರ ಹಂಚಿಕೆಗೆ Hostel Wise inmates ಮಾಹಿತಿಯನ್ನು ಆಹಾರ ಇಲಾಖೆಗೆ ನೀಡಿದರೆ, ಅದೇ ಪ್ರಕಾರ ಆಹಾರ ಇಲಾಖೆಯವರು ಹಂಚಿಕೆಗೆ ಕ್ರಮವಹಿಸಬೇಕಿದೆ ಎಂದು ಆಯೋಗವು ಅಭಿಪ್ರಾಯಿಸಿತು. ಹಾಗೂ ಒಂದು ವೇಳೆ ಆಹಾರ ಹಂಚಿಕೆಯಲ್ಲಿ ಕೊರತೆ ಬಂದರೆ ಆಯೋಗದ ಗಮನಕ್ಕೆ ತರಬೇಕೆಂದು ತಿಳಿಸಿದರು.

ಮಕ್ಕಳಿಗೆ ನೀಡುವ ಆಹಾರದಲ್ಲಿ ಯಾವುದೇ ಕೊರತೆ ಉಂಟಾಗಬಾರದು ಮಕ್ಕಳಿಗೆ ಮೊದಲು ಊಟ, ನಂತರ ವಿದ್ಯೆ ಈ ವ್ಯವಸ್ಥೆಯಲ್ಲಿ ರುಚಿ, ಶುಚಿ ಪೌಷ್ಠಿಕಾಂಶವನ್ನು ಕಾಪಾಡಬೇಕೆಂದು ಆಯೋಗವು ತಿಳಿಸಿತು.

(ಕ್ರಮ: ಉಪ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ)

<u>ಕಾನೂನು ಮಾಪನ ಶಾಸ್ತ್ರ ಇಲಾಖೆ:</u>

ನ್ಯಾಯಬೆಲೆ ಅಂಗಡಿಗಳಲ್ಲಿ ಸ್ಟ್ಯಾಂಪಿಂಗ್ ಮಾಡದೇ ಇರುವಂತಹ 200 ಪ್ರಕರಣಗಳನ್ನು ದಾಖಲಿಸಿದ್ದು, ಅಂತಹ ನ್ಯಾಯಬೆಲೆ ಅಂಗಡಿಯವರಿಗೆ ದಂಡ ವಿಧಿಸಲಾಗಿದೆಯೆಂದು ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು ತಿಳಿಸಿದರು.

ಆಹಾರ ಗೋದಾಮುಗಳವರು/ನ್ಯಾಯಬೆಲೆ ಅಂಗಡಿಗಳವರು ಕಾನೂನು ಮಾಪನ ಶಾಸ್ತ್ರ ಇಲಾಖೆಯಿಂದ ಸ್ಟ್ಯಾಂಪಿಂಗ್ ಮಾಡಿಸದೇ ಇದ್ದಲ್ಲಿ ಅದರ ಮಾಹಿತಿಯನ್ನು ಆಹಾರ ಇಲಾಖೆಯ ಉಪನಿರ್ದೇಶಕರುಗಳಿಗೆ ನೀಡಬೇಕೆಂದು ಹಾಗೂ ಅಂತಹವರ ಪ್ರಾಧಿಕಾರ/ಪರವಾನಗಿಯನ್ನು ನವೀಕರಿಸುವ ಬಗ್ಗೆ ವಲಯಾಧಿಕಾರಿಗಳು ಅಗತ್ಯ ಕ್ರಮ ತೆಗೆದುಕೊಳ್ಳಬೇಕೆಂದು ಆಯೋಗದ ಸದಸ್ಯ ಕಾರ್ಯದರ್ಶಿಗಳು ಸಭೆಯಲ್ಲಿ ತಿಳಿಸಿದರು.

ಕಡೆಯದಾಗಿ ಆಹಾರ ಆಯೋಗಕ್ಕೆ ಸಿಬ್ಬಂದಿಗಳ ನೇರ ನೇಮಕಾತಿಯಾಗುವವರೆಗೆ ಪ್ರತಿ ಇಲಾಖೆಯಿಂದ ನಿಯೋಜನೆ ಮೇಲೆ ಒಬ್ಬ ಪ್ರ.ದ.ಸರನ್ನು ಆಯೋಗಕ್ಕೆ ನಿಯೋಜಿಸುವಂತೆ ಸಭೆಗೆ ಹಾಜರಿದ್ದ ಎಲ್ಲಾ ಅಧಿಕಾರಿಗಳನ್ನು ಆಯೋಗದ ಅಧ್ಯಕ್ಷರು ಕೋರಿದರು.

(ಕ್ರಮ: ಉಪ ನಿಯಂತ್ರಕರು, ತೂಕ ಮತ್ತು ಅಳತೆ ಕಾನೂನು ಮಾಪನ ಶಾಸ್ತ್ರ ಇಲಾಖೆ)

ಆಯೋಗವು ಕಳೆದ ಒಂದು ವರ್ಷದಿಂದ ಅನೇಕ ಜಿಲ್ಲೆಗಳಿಗೆ ಭೇಟಿ ನೀಡಿ ಕಂಡು ಬಂದ ನ್ಯೂನತೆಗಳನ್ನು ಸರಿಪಡಿಸಿಕೊಳ್ಳುವಂತೆ ಹಾಗೂ ಕೆಲವು ಸುಧಾರಣೆಗಳನ್ನು ತರುವಂತೆ ಸಲಹೆಗಳನ್ನು ನೀಡಿ ನಡವಳಿಗಳನ್ನು ಹೊರಡಿಸುತ್ತಿರುತ್ತದೆ. ಸಂಬಂಧಪಟ್ಟ ಅಧಿಕಾರಿಗಳು ಸದರಿ ನಡಾವಳಿಗಳ ಪ್ರತಿಗಳನ್ನು

ಪಡೆದು ಇಲಾಖೆಯ ಮುಖ್ಯಸ್ಥರ ಗಮನಕ್ಕೆ ತಂದು ರಾಜ್ಯ / ಜಿಲ್ಲಾ / ತಾಲ್ಲೂಕು ಹಂತಗಳಲ್ಲಿ ನಡೆಯುವ ಸಭೆಗಳಲ್ಲಿ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಿ ಆಯೋಗವು ನೀಡಿರುವ ಸಲಹೆ, ಸೂಚನೆಗಳನ್ನು ಕಾರ್ಯಗತಗೊಳಿಸಲು ತಿಳಿಸಲಾಯಿತು. ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸದಸ್ಯ ಕಾರ್ಯದರ್ಶಿ
ಕರ್ನಾಟಕ ರಾಜ್ಯ ಆಹಾರ ಆಯೋಗ
ಹಾಗೂ ಅಪರ ನಿರ್ದೇಶಕರು-2
ಆನಾಸ & ಗ್ರಾವ್ಯ ಇಲಾಖೆ, ಬೆಂಗಳೂರು.

ಸಹಿ/-
(ಡಾ.ಎನ್.ಕೃಷ್ಣಮೂರ್ತಿ)
ಅಧ್ಯಕ್ಷರು
ಕರ್ನಾಟಕ ರಾಜ್ಯ ಆಹಾರ ಆಯೋಗ
ಬೆಂಗಳೂರು

ದಿನಾಂಕ:31.08.2018. ರಂದು ನಡೆದ ಕರ್ನಾಟಕ ರಾಜ್ಯ ಆಹಾರ ಆಯೋಗದ ಹದಿನಾಲ್ಕನೇ ಸಭೆಯ ನಡವಳಿಗಳು.

*****

ಉಪಸ್ಥಿತರು :

1) ಶ್ರೀ ವಿ.ಬಿ.ಪಾಟೀಲ್, ಸದಸ್ಯರು, (ಅಧ್ಯಕ್ಷರ ಪ್ರಭಾರ) ಕರ್ನಾಟಕ ರಾಜ್ಯ ಆಹಾರ ಆಯೋಗ, ಬೆಂಗಳೂರು.
2) ಶ್ರೀ ಹೆಚ್.ವಿ.ಶಿವಶಂಕರ್, ಸದಸ್ಯರು, ಕರ್ನಾಟಕ ರಾಜ್ಯ ಆಹಾರ ಆಯೋಗ, ಬೆಂಗಳೂರು.
3) ಶ್ರೀ ಹಸಬಿ.ಡಿ.ಜಿ., ಸದಸ್ಯರು, ಕರ್ನಾಟಕ ರಾಜ್ಯ ಆಹಾರ ಆಯೋಗ, ಬೆಂಗಳೂರು.
4) ಶ್ರೀ ಬಿ.ಎ.ಮೊಹಮದ್ ಅಲಿ, ಸದಸ್ಯರು, ಕರ್ನಾಟಕ ರಾಜ್ಯ ಆಹಾರ ಆಯೋಗ, ಬೆಂಗಳೂರು.
5) ಶ್ರೀಮತಿ ಮಂಜುಳ ಬಾಯಿ, ಆರ್.ಸಾತ್‌ನೂರ್ ಸದಸ್ಯರು, ಕರ್ನಾಟಕ ರಾಜ್ಯ ಆಹಾರ ಆಯೋಗ, ಬೆಂಗಳೂರು.
6) ಶ್ರೀಮತಿ ಸುಜಾತ ಡಿ.ಹೊಸಮನಿ, ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಆಹಾರ ಆಯೋಗ ಅಪರ ನಿರ್ದೇಶಕರು-2/ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಬೆಂಗಳೂರು.
7) ಶ್ರೀ ಅಪ್ಸರ್ ಪಾಷ, ಸಹಾಯಕ ನಿರ್ದೇಶಕರು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಬೆಂಗಳೂರು.
8) ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ (ಐ.ಸಿ.ಡಿ.ಎಸ್.ವಿಭಾಗ), ಬೆಂಗಳೂರು.
9) ಶ್ರೀ.ಚಂದ್ರಶೇಖರ್ ಉಪ ಪ್ರಧಾನ ವ್ಯವಸ್ಥಾಪಕರು ಕರ್ನಾಟಕ ಆಹಾರ ನಾಗರಿಕ ಸರಬರಾಜು ನಿಗಮ ನಿಯಮಿತ, ಬೆಂಗಳೂರು.
10) ಶ್ರೀಮತಿ ಹೇಮಲತ.ಬಿ.ವಿ, ಸಹಾಯಕ ನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ಮಧ್ಯಾಹ್ನ ಉಪಾಹಾರ ಯೋಜನೆ.
11) ಶ್ರೀಮತಿ ಸುಮಯ್ಯ ರೂಹಿ, ಉಪ ನಿರ್ದೇಶಕರು (ಶಿಕ್ಷಣ) ಸಮಾಜ ಕಲ್ಯಾಣ ಇಲಾಖೆ ಬೆಂಗಳೂರು.
12) ಶ್ರೀ.ಎಂ.ಎಸ್.ರಾಮಯ್ಯ ಉಪ ನಿಯಂತ್ರಕರು (ಆಡಳಿತ) ಕಾನೂನು ಮಾಪನ ಶಾಸ್ತ್ರ ಇಲಾಖೆ ಬೆಂಗಳೂರು.
13) ಶ್ರೀ.ಎಸ್.ಹೆಚ್. ಪೂಜಾರ್ ಸಹಾಯಕ ನಿರ್ದೇಶಕರು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಬೆಂಗಳೂರು.
14) ಸಹಾಯಕ ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ ಬೆಂಗಳೂರು.

***

ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಆಹಾರ ಆಯೋಗರವರು ಸಭೆಯಲ್ಲಿ ಹಾಜರಿದ್ದ ಅಧ್ಯಕ್ಷರು, ಸದಸ್ಯರು ಹಾಗೂ ಎಲ್ಲಾ ಅಧಿಕಾರಿಗಳಿಗೆ ಸ್ವಾಗತವನ್ನು ಕೋರಿ ಸಭೆಯ ಅಧ್ಯಕ್ಷತೆ ವಹಿಸಲು ಹಿರಿಯ ಸದಸ್ಯರಾದಂತಹ ಶ್ರೀ.ವಿ.ಬಿ.ಪಾಟೀಲ್ ರವರನ್ನು ವಿನಂತಿಸಿದರು.

**ಅಜೆಂಡಾ – 1 :**

ದಿನಾಂಕ: 25.07.2018 ರಂದು ನಡೆದ ಸಭೆಯ ನಡವಳಿಗಳಲ್ಲಿ ತೂಕದ ಯಂತ್ರಗಳು:ಶೀರ್ಷಿಕೆಯಡಿ "ಜಿಲ್ಲೆಯಲ್ಲಿ 983 ನ್ಯಾಯಬೆಲೆ ಅಂಗಡಿಗಲ ಪೈಕಿ 773 ನ್ಯಾಯಬೆಲೆ ಅಂಗಡಿಗಳ ತೂಕದ ಯಂತ್ರಗಳನ್ನು ಸ್ಟಾಂಪಿಂಗ್

ಮಾಡಲಾಗಿದ್ದು ಇನ್ನುಳಿದ ಅಂಗಡಿಗಳ ಯಂತ್ರ ಅವಧಿಗೆ ಮೊದಲೆ ಸ್ಟಾಂಪಿಗ್ ಮಾಡಲಾಗಿರುವುದೆಂದು ಸಂಬಂಧಪಟ್ಟ ಅಧಿಕಾರಿಗಳು ಆಯೋಗಕ್ಕೆ ತಿಳಿಸಿದರು." ಇದನ್ನು ತೆಗೆದು ಹಾಕಲು ತೀರ್ಮಾನಿಸಲಾಯಿತು. ಉಳಿದ ನಡವಳಿಗಳನ್ನು ಓದಿ ದೃಢೀಕರಿಸಲಾಯಿತು.

**ಅಜೆಂಡಾ–2**

ಹಿಂದಿನ ಸಭೆಯಲ್ಲಿ ತೀರ್ಮಾನಿಸಿದ ವಿಷಯಗಳ ಬಗ್ಗೆ ತೆಗೆದುಕೊಂಡ ಕ್ರಮಗಳನ್ನು/ಅನುಪಾಲನಾ ವರದಿಗಳನ್ನು ಪರಿಶೀಲಿಸಲಾಯಿತು. ಈ ಸಂದರ್ಭದಲ್ಲಿ ಅಧ್ಯಕ್ಷರು ಇಲಾಖೆಗಳಿಂದ ಅನುಪಾಲನಾ ವರದಿಗಳನ್ನು ವಿಳಂಭವಾಗಿ ಕಳುಹಿಸುತ್ತಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು. ಸಭಾನಡುವಳಿ ಬರುವವರೆಗೆ ಕಾಯದೆ, ಸಭೆಯಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ಅನುಪಾಲನಾ ವರದಿಯನ್ನು ಮುಂಚಿತವಾಗಿ ಕಳುಹಿಸುವಂತೆ ಎಲ್ಲಾ ಅಧಿಕಾರಿಗಳಿಗೆ ಸೂಚಿಸಿದರು. ಸಭೆಗೆ ಅಧಿಕಾರಿಗಳು ಗೈರುಹಾಜರಾಗಿರುವುದರ ಬಗ್ಗೆ ಕೂಡಾ ಆಯೋಗವು ವಿಷಾಧ ವ್ಯಕ್ತಪಡಿಸಿತು ಆರೋಗ್ಯ ಇಲಾಖೆ, ಆಹಾರ ಇಲಾಖೆ ಅಧಿಕಾರಿಗಳು ಸಭೆಗೆ ಹಾಜರಾಗಿರಲಿಲ್ಲ, ಆಹಾರ ಆಯೋಗವು ಶಾಸನಾತ್ಮಕ (Statutory Authority) ಆಯೋಗವಾಗಿದ್ದು, ರಾಷ್ಟ್ರೀಯ ಆಹಾರ ಭದ್ರತೆ 2013ರ ಕಲಂ 33ರಲ್ಲಿ ಆಯೋಗದ ದೂರು ಪರಿಹರಿಸುವ ಕಾರ್ಯದಲ್ಲಿ ಅಧಿಕಾರಿ/ಸಿಬ್ಬಂದಿಗಳು ಆಯೋಗಕ್ಕೆ ಸಹಕರಿಸದಿದ್ದಲ್ಲಿ ಹಾಗೂ ಸಭೆಗೆ ಗೈರು ಹಾಜರಾಗುವುದು, ಅನುಪಾಲನ ವರದಿ ಸಲ್ಲಿಸದಿರುವ ಹಾಗೂ ಆಯೋಗದ ಸೂಚನೆಗಳನ್ನು ಪಾಲಿಸದಿರುವ ಅಧಿಕಾರಿಗಳಿಗೆ ದಂಡ ವಿಧಿಸುವ ಅಧಿಕಾರವನ್ನು ಆಯೋಗವು ಹೊಂದಿರುವುದಾಗಿ ತಿಳಿಸಿದರು. ಈ ರೀತಿಯ ಕ್ರಮಕ್ಕೆ ಅವಕಾಶ ನೀಡದಂತೆ ಸೂಚನೆ ಪಾಲಿಸುವಂತೆ ಅಧಿಕಾರಿಗಳಿಗೆ ತಿಳಿಸಿದರು.

**ಅಜೆಂಡಾ–3 : ಕೆ.ಎಫ್.ಸಿ.ಎಸ್.ಸಿ**

ಕೆಎಫ್.ಸಿ.ಎಸ್.ಸಿ ಗೋದಾಮಿನಲ್ಲಿ ದಾಸ್ತಾನನ್ನು ವೈಜ್ಞಾನಿಕವಾಗಿ ಜೋಡಿಸುತ್ತಿಲ್ಲವೆಂದು. ಹಾಗೂ ಮರದ ಕ್ರೇಟ್ಸ್ ಹಾಕುತ್ತಿಲ್ಲವೆಂದು ಪದೇ ಪದೇ ಪ್ರತಿ ಸಭೆಯಲ್ಲಿ ತಿಳಿಸುತ್ತಿದ್ದರೂ ಕ್ರಮವಹಿಸದೇ ಹಿಂದಿನ ಸಭೆಯಲ್ಲಿ ನೀಡಲಾಗಿರುವ ಅನುಪಾಲನಾ ವರದಿಯಲ್ಲೂ ಸದರಿ ವಿಷಯದ ಬಗ್ಗೆ ಯಾವುದೇ ಮಾಹಿತಿ ತಿಳಿಸದೇ ಇರುವುದಕ್ಕೆ ಆಯೋಗವು ಆಕ್ಷೇಪಿಸಿತು. ಇದಕ್ಕೆ ಕೆ.ಎಫ್.ಸಿ.ಎಸ್ ಅಧಿಕಾರಿಗಳು ಗೋದಾಮಿಗೆ ಪ್ರತಿದಿನ ಬರುವ ದಾಸ್ತಾನು ಆ ದಿನವೇ ವಿತರಣೆಯಾಗುವುದರಿಂದ ಮರದ ಕ್ರೇಟ್ಸ್ ಹಾಕಿರುವುದಿಲ್ಲವೆಂದು ತಿಳಿಸಿದರು. ಆದರೆ ಆಯೋಗವು ಇದನ್ನು ಒಪ್ಪಲಿಲ್ಲ. ಮರದ ಕ್ರೇಟ್ಸ್ ಉಪಯೋಗಿಸದೇ ಇದ್ದಲ್ಲಿ ದಾಸ್ತಾನು ಹಾಳಾಗುವುದಲ್ಲದೆ ವಿತರಣೆಗೆ ಅನುಪಯುಕ್ತವಾಗುವುದೆಂದು ಆಯೋಗವು ಅಭಿಪ್ರಾಯ ನೀಡಿತು.

ಗೋದಾಮುಗಳಲ್ಲಿರುವ ಹಳೆಯ ಉಳಿಕೆ ದಾಸ್ತಾನುಗಳ ವಿಲೇವಾರಿಗೆ ಕೆ.ಎಫ್.ಸಿ.ಎಸ್.ಸಿ ರವರು ತಿಳುವಳಿಕೆ ನೀಡಿರುವುದಾಗಿ ಹಿಂದಿನ ಸಭೆಯ ಅನುಪಾಲನಾ ವರದಿಯಲ್ಲಿ ತಿಳಿಸಿದ್ದು ಸದರಿ ನೋಟೀಸ್ ನೀಡಿದ ನಂತರ ಏನು ಕ್ರಮಕೈಗೊಳ್ಳಲಾಗಿದೆ ಈ ಕುರಿತು ಸ್ಪಷ್ಟ ವರದಿಯನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ಈ ಬಗ್ಗೆ ಶೀಘ್ರ ಕ್ರಮಕೈಗೊಂಡು ಹಳೆಯ ಉಳಿಕೆ ದಾಸ್ತಾನನ್ನು ಪೂರ್ಣವಾಗಿ ವಿಲೇವಾರಿ ಮಾಡಿ ಎಷ್ಟು ಪ್ರಮಾಣ ವಿತರಣೆಯಾಗಿದೆ, ಎಷ್ಟು ನಷ್ಟವಾಯಿತೆಂಬ ಬಗ್ಗೆ ವಿವರವಾದ ವರದಿಯನ್ನು ಮುಂದಿನ ಸಭೆಯೊಳಗೆ ಸಲ್ಲಿಸುವಂತೆ ಆಯೋಗವು ಸೂಚಿಸಿತು.

ಹಿಂದಿನ ಸಭೆಯಲ್ಲಿ ಪ್ರಸ್ತಾಪಿಸಲಾಗಿದ್ದ 5026 ಕ್ವಿಂಟಾಲ್ ಗೋಧಿ ದಾಸ್ತಾನಿನ ಬಗ್ಗೆ ಚರ್ಚಿಸಲಾಯಿತು. 5026 ಕ್ವಿಂಟಾಲ್ ಗೋಧಿ ವಿತರಣೆ ಆಗುತ್ತಿದೆ ಎಂದು ಸಭೆಗೆ ಹಾಜರಿದ್ದ ಕೆ.ಎಫ್.ಸಿ.ಎಸ್.ಸಿ ಅಧಿಕಾರಿಗಳು ತಿಳಿಸಿದರು. ಆದರೆ ದಾಸ್ತಾನು ಪೂರ್ಣವಾಗಿ ವಿತರಣೆ ಆಗಿರುವ ಬಗ್ಗೆ ವಿವರಿಸಿರುವುದಿಲ್ಲವೆಂದು ಹಾಗೂ ಹಳೆ ದಾಸ್ತಾನು ಉಳಿಕೆ ರಾಗಿಯ ಬಗ್ಗೆ ಗೋದಾಮಿನವರು ಹೆಚ್ಚು ಗಮನ ಹರಿಸಿರುವುದಿಲ್ಲ. ದಾಸ್ತಾನು ಹುಳ ಹಿಡಿದು ವಿತರಣೆಗೆ ಅನುಪಯುಕ್ತವಾಗುತ್ತಿದ್ದರೂ ಅದನ್ನು ಶುಚಿಗೊಳಿಸಿ ವಿತರಣೆಗೆ ಉಪಯೋಗಿಸದೆ ಹಾಗೆಯೇ ವಿತರಣೆ

ಮಾಡುತ್ತಿದ್ದುದು ಆಯೋಗವು ಯಶವಂತಪುರ ಗೋದಾಮಿಗೆ ಭೇಟಿ ನೀಡಿದಾಗ ವಿಷಾದದಿಂದ ಗಮನಿಸಿದೆ. ಈ ಬಗ್ಗೆ ಕೂಡಲೇ ಒಂದು ವಿವರವಾದ ವರದಿಯನ್ನು ಆಯೋಗಕ್ಕೆ ಸಲ್ಲಿಸಲು ಕೆ.ಎಫ್.ಸಿ.ಎಸ್.ಸಿ ರವರಿಗೆ ಸೂಚಿಸಲಾಯಿತು.

(ಕ್ರಮ: ಪ್ರಧಾನ ವ್ಯವಸ್ಥಾಪಕರು ಕೆ.ಎಫ್.ಸಿ.ಎಸ್.ಸಿ)

ಆಯೋಗವು ವಿವಿಧ ಜಿಲ್ಲೆಗಳಿಗೆ ಭೇಟಿ ನೀಡಿ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ರಾಷ್ಟ್ರೀಯ ಭದ್ರತಾ ಕಾಯಿದೆ ಜಾರಿಗೆ ಸಂಬಂಧಿಸಿದ ಜಿಲ್ಲಾ ಮಟ್ಟದ ಜಿಲ್ಲಾಧಿಕಾರಿಗಳ ಸಭೆ ನಡೆಸಿ ಸಭೆಯ ನಡವಳಿಗಳನ್ನು ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೆ ಕಳುಹಿಸುತ್ತಿದೆ. ಆದರೆ ಜಿಲ್ಲಾ ಮಟ್ಟದ ಅಧಿಕಾರಿಗಳು ತಮಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಅನುಪಾಲನಾ ವರದಿಯನ್ನು ಆಯೋಗಕ್ಕೆ ಸಲ್ಲಿಸುತ್ತಿಲ್ಲ. ಈ ವಿಷಯವನ್ನು ಆಯೋಗವು ಗಂಭೀರವಾಗಿ ಪರಿಗಣಿಸಿ ಇನ್ನು ಮುಂದೆ ಜಿಲ್ಲೆಗಳಲ್ಲಿನ ಜಿಲ್ಲಾಮಟ್ಟದ ಅಧಿಕಾರಿಗಳ ಸಭೆಯ ನಡವಳಿಗಳನ್ನು ಸಂಬಂಧಿಸಿದ ಇಲಾಖಾ ಮುಖ್ಯಸ್ಥರುಗಳಿಗೂ ಕಳುಹಿಸಲು ಸದಸ್ಯ ಕಾರ್ಯದರ್ಶಿಗಳಿಗೆ ಸೂಚಿಸಿತು.

ರಾಜ್ಯಮಟ್ಟದ ಅಧಿಕಾರಿಗಳು ತಮಗೆ ಸಂಬಂಧಪಟ್ಟ ವಿಷಯಗಳ ಬಗೆಗಿನ ಅನುಪಾಲನಾ ವರದಿಯನ್ನು ತಮ್ಮ ಅಧೀನದ ಜಿಲ್ಲಾ ಮಟ್ಟದ ಅಧಿಕಾರಿಗಳಿಂದ ಪಡೆದು ಆಯೋಗಕ್ಕೆ ಸಲ್ಲಿಸುವಂತೆ ಸೂಚಿಸಲಾಯಿತು.

ಇದುವರೆಗೆ ಸ್ವೀಕೃತವಾಗದ ಅನುಪಾಲನಾ ವರದಿಗಳನ್ನು ಪಡೆಯಲು ಅನುಕೂಲವಾಗುವಂತೆ ಆಯಾ ಜಿಲ್ಲೆಗಳ ಸಭೆಯ ನಡುವಳಿಯನ್ನು ರಾಜ್ಯಮಟ್ಟದ ಅಧಿಕಾರಿಗಳಿಗೆ ಕಳುಹಿಸಲು ಸೂಚಿಸಲಾಯಿತು.

(ಕ್ರಮ: ಸದಸ್ಯ ಕಾರ್ಯದರ್ಶಿ)

ಅಜೆಂಡಾ: 4

**ಮಧ್ಯಾಹ್ನ ಉಪಹಾರ ಯೋಜನೆಯ ಪರಿಣಾಮಕಾರಿ ಅನುಷ್ಠಾನದ ಬಗ್ಗೆ:**

ಹಿಂದಿನ ಸಭೆಯಲ್ಲಿ ಚರ್ಚಿಸಿದಂತೆ, ಸಭೆಗೆ ಹಾಜರಿದ್ದ ಸಾರ್ವಜನಿಕ ಶಿಕ್ಷಣ ಇಲಾಖೆ, ಮಧ್ಯಾಹ್ನ ಉಪಾಹಾರ ಯೋಜನೆ ಅಧಿಕಾರಿಗಳು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಮಧ್ಯಾಹ್ನ ಉಪಾಹಾರ ಯೋಜನೆಯ ಅನುಷ್ಠಾನವು 100% ಪೂರ್ಣವಾಗಿ ಯಶಸ್ವಿಯಾಗಿ ಕಾರ್ಯಕೈಗೊಳ್ಳಲಾಗಿದೆ ಎಂದು ಆಯೋಗಕ್ಕೆ ತಿಳಿಸಿದರು.

ಜಿಲ್ಲೆಗಳ ಶಾಲೆಯ ಶೌಚಾಲಯ, ನೀರು, ಸ್ವಚ್ಚತೆಯ ವ್ಯವಸ್ಥೆ ಸರಿಯಾಗಿಲ್ಲ. ಈ ವ್ಯವಸ್ಥೆಯು ಸುಧಾರಿಸಬೇಕಿದೆ ಎಂದು ಆಯೋಗವು ಮಧ್ಯಾಹ್ನ ಉಪಾಹಾರ ಯೋಜನೆಯ ಅಧಿಕಾರಿಗಳಿಗೆ ತಿಳಿಸಿತು. ಅಧಿಕಾರಿಯು ಈ ವ್ಯವಸ್ಥೆಯ ಬಗ್ಗೆ ಯಾವುದೇ ಪ್ರತ್ಯೇಕ ಅನುದಾನ ಬಿಡುಗಡೆಯಾಗುತ್ತಿಲ್ಲವೆಂದು ಸಭೆಯಲ್ಲಿ ಹಾಜರಿದ್ದ ಅಧಿಕಾರಿಯ ತಿಳಿಸಿರುವುದಕ್ಕೆ, ಯಾವುದಾದರೂ ಬಿಡುಗಡೆಯಾದ ಅನುದಾನದಿಂದ ಶಾಲಾ ಸ್ವಚ್ಚತೆ ಹಾಗೂ ಶೌಚಾಲಯ ಸ್ವಚ್ಚತೆ ಹಾಗೂ ಶುದ್ದ ಕುಡಿಯುವ ನೀರನ್ನು ಶಾಲೆಗಳಿಗೆ ಒದಗಿಸಬೇಕೆಂದು ಆಯೋಗವು ಸೂಚಿಸಿತು.

ಮಧ್ಯಾಹ್ನ ಉಪಾಹಾರ ಯೋಜನೆಯಡಿ ಸದ್ಯಕ್ಕೆ ಹೊಸದಾಗಿ ಯಾವುದೇ ಯೋಜನೆಯನ್ನು ಕೈಗೊಂಡಿರುವುದಿಲ್ಲವೆಂದು ಸಭೆಯಲ್ಲಿದ್ದ ಅಧಿಕಾರಿಯವರು ತಿಳಿಸಿದರು.

ಆಯೋಗವು ಅಕ್ಷಯಪಾತ್ರೆಯ ಯೋಜನೆ ಬಗ್ಗೆ ಚರ್ಚೆ ನಡೆಸಿ, ಈ ಯೋಜನೆಯಡಿ ಶಾಲೆಗಳಿಗೆ ನೀಡಲಾಗುತ್ತಿರುವ ಆಹಾರದಲ್ಲಿ ಈರುಳ್ಳಿ, ಬೆಳ್ಳುಳ್ಳಿ, ಇಂತಹ ಪೌಷ್ಠಿಕ ಪದಾರ್ಥಗಳು ಬಳಕೆಯಾಗುತ್ತಿಲ್ಲದಿರುವ ಬಗ್ಗೆ ಪರಿಶೀಲಿಸಿ ಮುಂದಿನ ಸಭೆಯೊಳಗೆ ವರದಿ ನೀಡುವಂತೆ ಆಯೋಗವು ತಿಳಿಸಿತು.

(ಕ್ರಮ:ಜಂಟಿ ನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ಮಧ್ಯಾಹ್ನ ಉಪಾಹಾರ ಯೋಜನೆ)

ಅಜೆಂಟಡಾ–5

## ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆ(ಐ.ಸಿ.ಡಿ.ಎಸ್)

ಆಯೋಗವು ಈವರೆಗೆ ಭೇಟಿ ನೀಡಲಾದ ಜಿಲ್ಲೆಗಳ ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳ ಹಾಜರಾತಿ ಪುಸ್ತಕವನ್ನು ಸರಿಯಾಗಿ ನಿರ್ವಹಿಸಿರುವುದಿಲ್ಲ. ಹಾಜರಿರುವ ವಿದ್ಯಾರ್ಥಿಗಳಿಗೂ ಹಾಜರಾತಿ ಪುಸ್ತಕದಲ್ಲಿ ನಮೂದಿಸಿರುವುದಕ್ಕೂ ತಾಳೆಯಾಗಿರುವುದಿಲ್ಲ. ಹಾಜರಾತಿ ಬಗ್ಗೆ ವಿಚಾರಿಸಿದರೆ ಬಯೋಮೆಟ್ರಿಕ್ ಬಗ್ಗೆ ತಿಳಿಸಿರುತ್ತಾರೆ. ಇದರ ಬಗ್ಗೆ ಇಲಾಖೆಯವರು ಹೆಚ್ಚಿನ ಗಮನ ಹರಿಸಿ ಜಿಲ್ಲೆಗಳಲ್ಲಿನ ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳ ಹಾಜರಾತಿ ಬಗ್ಗೆ ಅಂಗನವಾಡಿ ಕಾರ್ಯಕರ್ತೆಯರ ತರಭೇತಿ ಬಗ್ಗೆ ಸುಧಾರಣೆ ತರುವಂತೆಯೂ ಆಯೋಗವು ಇಲಾಖೆಯ ಅಧಿಕಾರಿಗೆ ತಿಳಿಸಲು ಸೂಚಿಸಿತು.

ಜಿಲ್ಲೆಗಳ ಅಂಗನವಾಡಿ ಕೇಂದ್ರಗಳಲ್ಲಿ ಕಾರ್ಯಕರ್ತೆಯರಿಗೆ ನೀಡಲಾಗುವ ತರಭೇತಿಯ ಬಗ್ಗೆ ಚರ್ಚೆ ನಡೆಸಲಾಯಿತು. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಹಮ್ಮಿಕೊಂಡಿರುವ ಯೋಜನೆಗಳಲ್ಲಿ ಮಕ್ಕಳಿಗೆ ಮಾತೃಭಾಷೆಯ ಬಗ್ಗೆ ತಿಳುವಳಿಕೆ ಹಾಗೂ ಕಥೆಗಳು, ದೈಹಿಕ ಶಿಕ್ಷಣ ಈ ಎಲ್ಲಾ ಅಂಶಗಳ ತರಭೇತಿ ಬಗ್ಗೆ ಯೋಜನೆ ಹಮ್ಮಿಕೊಳ್ಳಲಾಗಿದೆ.

ಮೇಲ್ಕಂಡಂತೆ ಹಮ್ಮಿಕೊಳ್ಳಲಾಗಿರುವ ಎಲ್ಲಾ ಚಟುವಟಿಕೆಗಳನ್ನು ಕಾರ್ಯರೂಪಕ್ಕೆ ತಂದು ಯಶಸ್ವಿಗೊಳಿಸಬೇಕು ಕೇವಲ ಸುತ್ತೋಲೆ ಪ್ರಕಟಣೆ ಇವುಗಳಿಂದಲೇ ಮುಕ್ತಾಯಗೊಳ್ಳಬಾರದು ಸರ್ಕಾರದ ಯೋಜನೆಗಳನ್ನು ಅನುಷ್ಠಾನಗೊಳಿಸುವಲ್ಲಿ ಯಶಸ್ವಿಯಾಗಬೇಕು ಎಂದು ಆಯೋಗವು ಸಲಹೆ ನೀಡಿತು.

ಹಲವು ಜಿಲ್ಲೆಗಳಿಗೆ ಆಯೋಗವು ಬೇಟಿ ನೀಡಿದ ಸಮಯದಲ್ಲಿ ಯಾವುದೇ ಅಂಗನವಾಡಿ ಕೇಂದ್ರಗಳಲ್ಲಿ ಶಿಸ್ತು ಪಾಲನೆ ಇರುವುದಿಲ್ಲ ಹಾಗೂ ಮಕ್ಕಳಿಗೆ ಯಾವುದೇ ಚಟುವಟಿಕೆಗಳಾಗಲೀ ಕಂಡುಬಂದಿಲ್ಲ ಅಂಗನವಾಡಿ ಶಾಲೆಗಳಲ್ಲಿ ಮಕ್ಕಳಿಗೆ ವಿವಿಧ ಕಾರ್ಯಕ್ರಮಗಳನ್ನು ನಡೆಸಬೇಕು ಎಂದು ಆಯೋಗವು ಅಭಿಪ್ರಾಯಿಸಿತು.

ಮಕ್ಕಳ ಆರೋಗ್ಯ/ಅಪೌಷ್ಠಿಕತೆ ಬಗ್ಗೆ ಎನ್.ಆರ್.ಸಿಗೆ ಇಲಾಖೆಯವರು ಮಾಹಿತಿ ನೀಡುತ್ತಿಲ್ಲ. ಆರೋಗ್ಯ ಇಲಾಖೆ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗಳಲ್ಲಿ ಸಮನ್ವಯತೆ ಇರುವುದಿಲ್ಲ ಹಾಗೂ ಸರ್ಕಾರದಿಂದ ಆರೋಗ್ಯ ಇಲಾಖೆಗೆ ಸಂಬಂಧಪಟ್ಟಂತೆ ಹೊರಡಿಸಲಾಗುವ ಸುತ್ತೋಲೆ/(ತಾಯಿ ಮತ್ತು ಮಕ್ಕಳ ಪೋಷಣೆಗೆ ಬಿಡುಗಡೆಯಾಗುವ ಅನುದಾನ ಬಗ್ಗೆ) ಪಾಲಿಸುತ್ತಿಲ್ಲ. ಪ್ರತಿ 2 ತಿಂಗಳಿಗೊಮ್ಮೆ ಅಂಗನವಾಡಿ ಶಾಲಾ ಮಕ್ಕಳ ಆರೋಗ್ಯ ತಪಾಸಣೆ ಆಗಬೇಕಿದ್ದು, ಅದು ಸರಿಯಾಗಿ ಜಿಲ್ಲೆಗಳಲ್ಲಿ ನಡೆಯುತ್ತಿಲ್ಲ. ವೈದ್ಯಾಧಿಕಾರಿಗಳಿಗೆ ಮಕ್ಕಳ ಆರೋಗ್ಯದ ಬಗ್ಗೆ ಅಂಗನವಾಡಿ ಕಾರ್ಯಕರ್ತೆಯರು ಯಾವುದೇ ಮಾಹಿತಿಯನ್ನು ತಿಳಸದೆ ಇರುವುದು ಆಯೋಗದ ಗಮನಕ್ಕೆ ಬಂದಿರುವುದಾಗಿ ಸಭೆಗೆ ಹಾಜರಿದ್ದ ಅಧಿಕಾರಿಗಳಿಗೆ ತಿಳಿಸಿದರು. ಇನ್ನು ಮುಂದಾದರು ಆರೋಗ್ಯ ಇಲಾಖೆಯೊಂದಿಗೆ ಹೆಚ್ಚಿನ ಸಮನ್ವಯತೆಯಿಂದ ಕಾರ್ಯನಿರ್ವಹಿಸುವಂತೆ ಸೂಚಿಸಲಾಯಿತು.

(ಕ್ರಮ: ನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ)

ಅಜೆಂಡಾ–6

## ಅನ್ನ ಭಾಗ್ಯ ಯೋಜನೆ:

ಆಯುಕ್ತರು, ಆಹಾರ ನಾಗರಿಕ ಸರಬರಾಜು ಇಲಾಖೆಯಿಂದ ಸಾರ್ವಜನಿಕ ವಿತರಣಾ ಪದ್ಧತಿಯಡಿಯಲ್ಲಿ ಹಂಚಿಕೆಯಾಗುತ್ತಿರುವ ಆಹಾರ ಧಾನ್ಯಗಳ ಬಗ್ಗೆ ಗೋದಾಮುಗಳಲ್ಲಿನ ದಾಸ್ತಾನು ಉಳಿಕೆ (ಅಂತಿಮ ದಾಸ್ತಾನು ತಃಖ್ತೆ)

ಬಗ್ಗೆ ಜನವರಿ 2017 ರಿಂದ ಜನವರಿ 2018ರ ವರೆಗಿನ ಹಂಚಿಕೆ, ಅಂತಿಮ ಶಿಲ್ಕು, ಎತ್ತುವಳಿ ಮಾಹಿತಿ ಮತ್ತು ಪ್ರತಿ ತಿಂಗಳ ದಾಸ್ತಾನು ತಃಖ್ತೆ ನೀಡುವಂತೆ ಅನೇಕ ಬಾರಿ ಕೇಳಲಾಗುತ್ತಿದ್ದಾಗ್ಯೂ ಇದುವರೆಗೂ ಮಾಹಿತಿ ನೀಡಿರುವುದಿಲ್ಲ. ಆಯುಕ್ತರಿಗೆ ಈ ಬಗ್ಗೆ ಅರೆ ಸರ್ಕಾರಿ ಪತ್ರ ಬರೆಯಲಾಗಿದೆ. ಆದರೂ ಮಾಹಿತಿ ಒದಗಿಸಿಲ್ಲ ಎಂದು ಸಭೆಗೆ ಸಂಬಂಧಪಟ್ಟ ಸಹಾಯಕ ನಿರ್ದೇಶಕರು, (ಪಿಡಿಶಾಖೆ) ಇವರನ್ನು ಆಯೋಗವು ಪ್ರಶ್ನಿಸಿತು. ಆಯೋಗವು ಕೋರಿದ ಮಾಹಿತಿಯನ್ನು ಸಮರ್ಪಕವಾಗಿ ನೀಡದೇ ವಿಫಲರಾಗಿರುವುದರ ಬಗ್ಗೆ ಆಯೋಗವು ಅಸಮಾಧಾನ ವ್ಯಕ್ತಪಡಿಸಿ, ಇದು ದುರುಪಯೋಗ ಆಗಿರುವ ಬಗ್ಗೆ ಸಂಶಯಕ್ಕೆ ಎಡೆ ಮಾಡಿಕೊಡುತ್ತದೆ ಮತ್ತು ಪುಷ್ಠಿಯನ್ನು ನೀಡುತ್ತದೆ ಎಂದು ತಿಳಿಸಿದರು.

ದಿನಾಂಕ:01.09.2018ರಂದು ಆಯೋಗಕ್ಕೆ ಪಡಿತರದ ಅಂತಿಮ ಶಿಲ್ಕು ವಿವರಗಳ ಬಗ್ಗೆ ಆನ್‌ಲೈನ್ ಡೆಮೋ ನೀಡುವಂತೆ ಉಪಸ್ಥಿತರಿದ್ದ ಅಧಿಕಾರಿಗಳಿಗೆ ತಿಳಿಸಲಾಯಿತು ಆದರೆ ಸದರಿ ಅಧಿಕಾರಿಗಳು ಡೆಮೋ ನೀಡಲು ವಿಫಲಾಗಿರುತ್ತಾರೆ. ಆಯೋಗದ ಪ್ರತಿ ಸಭೆಗೆ ಆಯುಕ್ತಾಲಯದಿಂದ ಅಧಿಕಾರಿಗಳು ಗೈರುಹಾಜರಾಗುವುದು, ಅಥವಾ ಬೇರೆ ಬೇರೆ ಅಧಿಕಾರಿಗಳು ಬರುತ್ತಿರುವ ಹಾಗೂ ಆಯೋಗಕ್ಕೆ ಸಮರ್ಪಕವಾದ ಮಾಹಿತಿ ನೀಡದಿರುವುದರ ಬಗ್ಗೆ ವಿಷಾಧ ವ್ಯಕ್ತಪಡಿಸಿ, ಇದರಿಂದ ಹಿಂದಿನ ಸಭೆಯಲ್ಲಿ ಚರ್ಚಿತವಾದ ವಿಷಯಗಳ ಬಗ್ಗೆ ಅಧಿಕಾರಿಗಳಿಗೆ ಅರಿವು ಇಲ್ಲದೆ ಇರುವುದರಿಂದ ಯೋಜನೆ ಅನುಷ್ಠಾನದ ಬಗ್ಗೆ ಪರಿಶೀಲಿಸಲು ಸಾಧ್ಯವಾಗುತ್ತಿಲ್ಲವೆಂದು ಆಯೋಗವು ಗಂಭೀರವಾಗಿ ಎಚ್ಚರಿಕೆ ನೀಡಿತು.

ಆಹಾರ ಗೋದಾಮುಗಳಲ್ಲಿನ ಉಳಿಕೆ ದಾಸ್ತಾನಿನ ಬಗ್ಗೆ (ಅಂತಿಮ ಶಿಲ್ಕು) ಆನ್‌ಲೈನ್ ಮುಖೇನ ಮಾಹಿತಿ ಪಡೆಯಲು ಅವಕಾಶವಿದ್ದರೂ, ಭೌತಿಕವಾಗಿ ಅಂತಿಮ ದಾಸ್ತಾನು ಪಡೆಯುತ್ತಿರುವುದಕ್ಕೆ ಕಾರಣ ತಿಳಿಯುತ್ತಿಲ್ಲ ಈ ಬಗ್ಗೆಯೂ ಹಿಂದಿನ ಎಲ್ಲಾ ಸಭೆಯಲ್ಲಿಯೂ, ಸಭೆಗೆ ಹಾಜರಿದ್ದವರನ್ನು ಪ್ರಶ್ನಿಸಲಾಗಿದೆ, ಇದು ಆಯುಕ್ತರ ಕಛೇರಿಯ ಗಂಭೀರ ಲೋಪವೆಂದು ಪರಿಗಣಿಸಿ ಸರ್ಕಾರದ ಗಮನಕ್ಕೆ ತರಲು ಆಯೋಗವು ತೀರ್ಮಾನಿಸಿತು.

(ಕ್ರಮ: ಜಂಟಿ ನಿರ್ದೇಶಕರು (ಸಂವಿ) ಶಾಖೆ ಹಾಗೂ ಸದಸ್ಯ ಕಾರ್ಯದರ್ಶಿಗಳು)

**ಆರೋಗ್ಯ ಇಲಾಖೆ:**

ಇಲಾಖೆಯಿಂದ ಯಾರೊಬ್ಬರೂ ಆಯೋಗದ ಯಾವ ಸಭೆಗೂ ಹಾಜರಾಗುತ್ತಿಲ್ಲ, ಇದರಿಂದ ಇಲಾಖೆಯ ಹಾಗೂ ಅದಕ್ಕೆ ಸಮನ್ವಯವಾದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಯೋಜನೆ ಅನುಷ್ಠಾನಗಳ ಕುರಿತು ಚರ್ಚಿಸಲು ಸಾಧ್ಯವಾಗುತ್ತಿಲ್ಲವೆಂದು ಆಯೋಗವುವಿಷಾದ ವ್ಯಕ್ತಪಡಿಸಿತು. ಹಾಗೂ ಆರೋಗ್ಯ ಇಲಾಖೆಯ ಮುಖ್ಯಸ್ಥರಿಗೆ ಅರೆ ಸರ್ಕಾರಿ ಪತ್ರ ಬರೆಯಲು ಆಯೋಗವು ಸೂಚಿಸಿತು.

(ಕ್ರಮ:ಸದಸ್ಯ ಕಾರ್ಯದರ್ಶಿ)

ಅಜೆಂಡಾ-7

ಸಮಾಜ ಕಲ್ಯಾಣ ಇಲಾಖೆ:-

ಈ ಹಿಂದಿನ ಸಭೆಯಲ್ಲಿ ಚರ್ಚಿಸಿದಂತೆ ಚಿತ್ತಾಪುರ ತಾಲ್ಲೂಕನ್ನು ಉದಾಹರಣೆಯಾಗಿಟ್ಟುಕೊಂಡು Post matric Hostelಗಳಲ್ಲಿನ ವಿದ್ಯಾರ್ಥಿಗಳಿಗೆ ಸರಿಯಾಗಿ ಸ್ನಾನಕ್ಕೆ ಬಿಸಿ ನೀರಿನ ವ್ಯವಸ್ಥೆ ಇರುವುದಿಲ್ಲ. ವಿದ್ಯಾರ್ಥಿಗಳಿಗೆ

ಚಹಾ ಮತ್ತು ಬಿಸ್ಕೆಟ್ ನೀಡಲಾಗುತ್ತಿಲ್ಲ. ವಸತಿ ನಿಲಯದ ದಾಖಲಾತಿ ರಿಜಿಸ್ಟರ್ ಸರಿಯಾಗಿ ನಿರ್ವಹಿಸಿರುವುದಿಲ್ಲ ಈ ಬಗ್ಗೆ ಇಲಾಖೆಯು ಹೆಚ್ಚಿನ ನಿಗಾ ವಹಿಸಬೇಕೆಂದು ಆಯೋಗವು ಹಾಜರಿದ್ದ ಅಧಿಕಾರಿಗಳಿಗೆ ಸೂಚಿಸಿತು.

ಹಾಸ್ಟೆಲ್‌ಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಮಂಚ, ಹಾಸಿಗೆ, ಫ್ಯಾನು, ಬೆಳಕಿನ ವ್ಯವಸ್ಥೆ ಇರುವುದಿಲ್ಲ ಈ ಎಲ್ಲಾ ಕೊರತೆಗಳನ್ನು ಇಲಾಖೆಯವರು ಗಮನಿಸಿ ಹಾಸ್ಟೆಲ್‌ಗಳ ವಿದ್ಯಾರ್ಥಿಗಳಿಗೆ ಮೂಲ ಸೌಲಭ್ಯಗಳನ್ನು ನೀಡುವಂತೆ ಸೂಚಿಸಲಾಯಿತು.

ಈ ಎಲ್ಲಾ ವಿಷಯಗಳ ಬಗ್ಗೆ ಸಭೆಯಲ್ಲಿ ಚರ್ಚಿಸಿದಂತೆ ಸೂಕ್ತ ಕ್ರಮವಹಿಸಿ ಮುಂದಿನ ಸಭೆಯಲ್ಲಿ ಪೂರ್ಣ ಮಾಹಿತಿಯೊಂದಿಗೆ(ಎಲ್ಲಾ ಜಿಲ್ಲೆಗಳ) ವರದಿ ನೀಡುವಂತೆ ಆಯೋಗವು ತಿಳಿಸಿತು.

ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿರ್ದೇಶಕರಿಗೆ ಸಭೆ ಸೂಚನೆಯನ್ನು ಕಡ್ಡಾಯವಾಗಿ ಕಳುಹಿಸುವಂತೆ ಕಛೇರಿಯ ಸಂಬಂಧಪಟ್ಟ ವಿಷಯ ನಿರ್ವಾಹಕರಿಗೆ ಸೂಚಿಸಲಾಯಿತು.

(ಕ್ರಮ: ಉಪ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ)

**ಕಾನೂನು ಮಾಪನ ಶಾಸ್ತ್ರ ಇಲಾಖೆ:**

ಸಭೆಗೆ ಹಾಜರಿದ್ದ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು, ಎಲ್ಲಾ ನ್ಯಾಯಬೆಲೆ ಅಂಗಡಿಗಳ ಪರಿಶೀಲನೆ ನಡೆಸಿ ಏಪ್ರಿಲ್ 2018 ರಿಂದ ಜುಲೈ 2018ರ ಅವಧಿಯಲ್ಲಿ ನ್ಯಾಯಬೆಲೆ ಅಂಗಡಿಯವರು ಸ್ಟಾಂಪಿಂಗ್ ಮಾಡಿಸದೇ ಇದ್ದ ನ್ಯಾಯಬೆಲೆ ಅಂಗಡಿಗಳ ವಿರುದ್ಧ 270 ಪ್ರಕರಣಗಳನ್ನು ದಾಖಲಿಸಿದೆ ಎಂದು ತಿಳಿಸಿದರು.

ಈ ಸಂಬಂಧ ಆಯೋಗದವರು ಸದರಿಯವರಿಗೆ ವಿಧಿಸುವ ದಂಡ ಮೊತ್ತದ ಬಗ್ಗೆ ಚರ್ಚೆ ನಡೆಸಿ ನ್ಯಾಯಬೆಲೆ ಅಂಗಡಿಗಳವರು ಸ್ಟಾಂಪಿಂಗ್ ಮಾಡಿಸಿದ ಅವಧಿ ಮೀರಿದ್ದಲ್ಲಿ ಅದನ್ನು ನವೀಕರಿಸಗೊಳ್ಳದಿದ್ದಾಗ ಸುಮಾರು ರೂ.500-2000 ವರೆಗೂ ದಂಡ ಹಾಕಲಾಗುತ್ತದೆ ಎಂದು ಆಯೋಗಕ್ಕೆ ತಿಳಿಸಿದರು.

ನ್ಯಾಯಬೆಲೆ ಅಂಗಡಿಯವರು ಸ್ಟಾಂಪಿಂಗ್ ಮಾಡಿಸದೇ ಇರುವವರ ವಿವರವನ್ನು ಕಾನೂನು ಮಾಪನ ಶಾಸ್ತ್ರ ಇಲಾಖೆಯ ಅಧಿಕಾರಿಗಳು ಆಯಾ ಜಿಲ್ಲೆಗಳ ಉಪನಿರ್ದೇಶಕರ ಗಮನಕ್ಕೆ ತಂದು ವಿವರ ನೀಡಿದರೆ, ನ್ಯಾಯಬೆಲೆ ಅಂಗಡಿಗಳ ಪರವಾನಗಿ/ಪ್ರಾಧಿಕಾರ ನವೀಕರಣ ಸಮಯದಲ್ಲಿ ಉಪ ನಿರ್ದೇಶಕರು ಕ್ರಮಕೈಗೊಳ್ಳಬಹುದಾಗಿರುತ್ತದೆ ಎಂದು ಆಯೋಗವು ಅಭಿಪ್ರಾಯಪಟ್ಟಿತು.

(ಕ್ರಮ: ಉಪ ನಿಯಂತ್ರಕರು, ತೂಕ ಮತ್ತು ಅಳತೆ ಕಾನೂನು ಮಾಪನ ಶಾಸ್ತ್ರ ಇಲಾಖೆ)

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸದಸ್ಯ ಕಾರ್ಯದರ್ಶಿ
ಕರ್ನಾಟಕ ರಾಜ್ಯ ಆಹಾರ ಆಯೋಗ
ಹಾಗೂ ಅಪರ ನಿರ್ದೇಶಕರು-2
ಆನಾಸ & ಗ್ರಾಮ್ಯ ಇಲಾಖೆ, ಬೆಂಗಳೂರು.

VBPatil
(ವಿ.ಬಿ.ಪಾಟೀಲ್)
ಅಧ್ಯಕ್ಷರು(ಪ್ರ)
ಕರ್ನಾಟಕ ರಾಜ್ಯ ಆಹಾರ ಆಯೋಗ
ಬೆಂಗಳೂರು